ಸಾಮಾಜಿಕ ನ್ಯಾಯಕ್ಕಾಗಿ

# ಸಮತೋಲ

ಸಂಸ್ಥಾಪಕರು : ಭೀಮಸೇನ ತೋರಗಲ್
ಸಂಪಾದಕರು : ಮಡಿವಾಳಪ್ಪಾ ಗು. ಮುಚಳಂಬಿ
ಮೋ : 9448521284, 9620141096

ಬೆಳಗಾವಿ, ಧಾರವಾಡ, ಗದಗ, ಬಾಗಲಕೋಟ, ವಿಜಯಪೂರ

ಕನ್ನಡ ದಿನಪತ್ರಿಕೆ

SAMATOLA
Kannada Daily
No.6699, Anjaneya Nagar, M.M. Extension
Belagavi-16
e-mail : smtbgm@gmail.com
☎: 4200368

R.N.I.No:50559/1980 | PMG/KA/NK/BM/300/18-20 | PERMITTED To POST AT RMS BELGAUM-2 | Vol - 41 | Issue -97 Sunday 10, JANUARY 2021 | Page 6 | Price Re. 1

# ಜ. 16ರಿಂದ ದೇಶದಲ್ಲಿ ಕೊರೋನಾ ಲಸಿಕೆ ನೀಡಿಕೆ

## ಆರೋಗ್ಯ ಸಿಬ್ಬಂದಿಗೆ ಮೊದಲ ಆದ್ಯತೆ



**ನವದೆಹಲಿ, ಜ,09 ಭಾರತ ಮಹಾಮಾರಿ ಕೊರೋನಾ ವೈರಸ್ ಗೆ ದೇಶಿಯವಾಗಿ ಎರಡು ಕೊರೋನಾ ಲಸಿಕೆ ತಯಾರಿಕೆ ಮಾಡಿದ್ದು, ಜನವರಿ 16 ರಿಂದ ದೇಶಾದ್ಯಂತ ವ್ಯಾಕ್ಸಿನೇಷನ್ ಡ್ರೈವ್(ಲಸಿಕೆ ಹಾಕುವುದು) ಆರಂಭವಾಗಲಿದೆ ಎಂದು ಶನಿವಾರ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.**

ಇಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ವೈರಸ್ ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಆರೋಗ್ಯ ಸಚಿವಾಲಯ ಈ ಪ್ರಕಟಣೆ ನೀಡಿದ್ದು, ಮೊದಲು ಸುಮಾರು 3 ಕೋಟಿ ಮುಂಚೂಣಿ ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುವುದು ಎಂದು ಹೇಳಿದೆ.

ನಂತರ 50 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಹಾಗೂ 50 ವರ್ಷದೊಳಗಿನ ಸುಮಾರು 27 ಕೋಟಿ ಜನರಿಗೆ ಕೋವಿಡ್-19 ಲಸಿಕೆ ನೀಡಲಾಗುವುದು ಎಂದು ಸರ್ಕಾರ ತಿಳಿಸಿದೆ.

ಪ್ರಧಾನಿ ಮೋದಿ ಅವರು ಕೋವಿಡ್ ಲಸಿಕೆಗಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಮಾಡಿಕೊಂಡಿರುವ ಸಿದ್ಧತೆಗಳ ಕುರಿತು ಉನ್ನತ ಮಟ್ಟದ ವರ್ಚ್ಯುವಲ್ ಸಭೆ ನಡೆಸಿದರು. ಸಭೆಯಲ್ಲಿ ಕ್ಯಾಬಿನೆಟ್ ಕಾರ್ಯದರ್ಶಿ, ಪ್ರಧಾನಮಂತ್ರಿ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಕಾರ್ಯದರ್ಶಿ ಮತ್ತು ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಕೊರೊನಾ ಲಸಿಕೆ ಹಂಚಿಕೆ: ನಾಳೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಸಭೆ

ನವದೆಹಲಿ: ಇಡೀ ವಿಶ್ವಕ್ಕೇ ಮಾರಕವಾಗಿ ಪರಿಣಮಿಸಿರುವ ಮಹಾಮಾರಿ ಕೊರೊನಾ ವೈರಸ್‌ಗೆ ಲಸಿಕೆ ನೀಡುವ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸೋಮವಾರ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಸೀರಮ್ ಇನ್‌ಸ್ಟಿಟ್ಯೂಟ್‌ನ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್‌ನ ಕೋವಾಕ್ಸಿನ್ ಎರಡು ಲಸಿಕೆಗಳನ್ನು ನಿರ್ಬಂಧಿತ ತುರ್ತು ಬಳಕೆಗೆ ದೇಶದ ಔಷಧ ನಿಯಂತ್ರಕ ಅನುಮೋದಿಸಿದ ಕೆಲ ದಿನಗಳ ನಂತರ ಲಸಿಕೆ ನೀಡಿಕೆಯ ಬಗ್ಗೆ ಮಹತ್ವದ ಸಭೆ ನಡೆಸಲಾಗುತ್ತಿದೆ. ಸಂಜೆ 4 ಗಂಟೆಗೆ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಸೀರಮ್ ಇನ್‌ಸ್ಟಿಟ್ಯೂಟ್‌ನಿಂದ ತಯಾರಿಸಲ್ಪಟ್ಟ ಕೋವಿಶೀಲ್ಡ್, ಶೇ 70ಕ್ಕಿಂತ ಅಧಿಕ ಪರಿಣಾಮಕಾರಿಯಾಗಿದೆ. ಕೊವಾಕ್ಸಿನ್ ಪ್ರಸ್ತುತ 3ನೇ ಹಂತದ ಪ್ರಯೋಗಗಳಲ್ಲಿದೆ. ಆದರೆ. ಇದು ಸುರಕ್ಷಿತವಾಗಿ ಮತ್ತು ದೃಢವಾಗಿ ರೋಗನಿರೋಧಕ ಪ್ರತಿಕ್ರಿಯೆ ನೀಡುತ್ತದೆ ಎಂದು ಔಷಧ ನಿಯಂತ್ರಕ ಕಳೆದ ವಾರವಷ್ಟೇ ಹೇಳಿತ್ತು.

ಈ ಎಲ್ಲಾ ಬೆಳವಣಿಗೆ ನಡುವೆ ಸೋಮವಾರ ಪ್ರಧಾನಿ ಮೋದಿಯವರು ಸಭೆ ನಡೆಸುವ ಹಿನ್ನೆಲೆಯಲ್ಲಿ ಲಸಿಕೆ ಕುರಿತಂತೆ ಯಾವೆಲ್ಲಾ ನಿರ್ಧಾರಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಳ್ಳಲಿವೆ ಎಂಬುದನ್ನು ಕಾದು ನೋಡಬೇಕಿದೆ

# ಗಡಿ ಸಂಘರ್ಷ: ಪೂರ್ವ ಲಡಾಕ್‌ನಲ್ಲಿ ಚೀನಾ ಸೈನಿಕನನ್ನು ಸೆರೆ ಹಿಡಿದ ಭಾರತೀಯ ಸೇನೆ



ನವದೆಹಲಿ,ಜ,09: ಜನವರಿ 8 ರಂದು ಪೂರ್ವ ಲಡಾಖ್‌ನ ಪಾಂಗೊಂಗ್ ಸರೋವರದ ದಕ್ಷಿಣ ಭಾಗದಲ್ಲಿ ಚೀನಾದ ಸೈನಿಕನನ್ನು ಭಾರತೀಯ ಸೈನಿಕರು ಬಂಧಿಸಿದ್ದಾರೆ ಎಂದು ಶನಿವಾರ ಅಧಿಕೃತ ಮೂಲಗಳು ತಿಳಿಸಿವೆ.

ವಾಸ್ತವಿಕ ಗಡಿ ನಿಯಂತ್ರಣ ರೇಖೆ(ಎಲ್‌ಎಸಿ)ಯ ಭಾರತದ ಭಾಗಕ್ಕೆ ಅತಿಕ್ರಮಣ ಮಾಡಿದ್ದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ)ಸೈನಿಕನನ್ನು ಆ ಪ್ರದೇಶದಲ್ಲಿ ನಿಯೋಜಿಸಲಾಗಿದ್ದ ಭಾರತೀಯ ಸೈನಿಕರು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಭಾರತ ಮತ್ತು ಚೀನಾ ನಡುವೆ ಸುಮಾರು ಎಂಟು ತಿಂಗಳ ಕಾಲ ನಡೆದ ಗಡಿ ಸಂಘರ್ಷದ ಬೆನ್ನಲ್ಲೇ ಚೀನಾ ಸೈನಿಕನನ್ನು ಸೆರೆ ಹಿಡಿಯಲಾಗಿದೆ.

ಎಲ್‌ಎಸಿ ದಾಟಿ ಬಂದ ಚೀನಾ ಸೈನಿಕನ ವಿರುದ್ಧ ಕಾರ್ಯವಿಧಾನಗಳು ಮತ್ತು ಸನ್ನಿವೇಶಗಳ ಪ್ರಕಾರ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭಾರತದೊಂದಿಗಿನ ಸುದೀರ್ಘ ಲಡಾಖ್ ಸಂಘರ್ಷದಲ್ಲಿ ನಿರತವಾಗಿರುವ ಚೀನಾ, ಗಡಿಯಿಂದ ಇನ್ನೂ ಕಾಲ್ಕಿಳಲು ಸಿದ್ಧವಿಲ್ಲ. ಲಡಾಖ್‌ನ ಪೂರ್ವ ಗಡಿಯಲ್ಲಿ ಇನ್ನೂ ಚೀನಿ ಸೈನಿಕರು ಭಾರೀ ಸಂಖ್ಯೆಯಲ್ಲಿ ಬೀಡು ಬಿಟ್ಟಿದ್ದಾರೆ ಎಂಬುದು ಈಗ ಮತ್ತೊಮ್ಮೆ ಸಾಭೀತಾಗಿದೆ.

# ನಾಳೆಯಿಂದ ರಾಜ್ಯಾದ್ಯಂತ ಬಿಜೆಪಿಯಿಂದ ಜನಸೇವಕ್ ಸಮಾವೇಶ

ಕಲಬುರಗಿ,ಜ,09: ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿರುವ ಸದಸ್ಯರಿಗೆ ಅಭಿನಂದನೆ ಹಾಗೂ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಬಿಜೆಪಿ ಇದೇ ಜನವರಿ 11ರಿಂದ 13ರವರೆಗೆ ವಿವಿಧ ಜಿಲ್ಲೆಗಳಲ್ಲಿ ಜನಸೇವಕ್ ಸಮಾವೇಶವನ್ನು ಹಮ್ಮಿಕೊಂಡಿದೆ ಎಂದು ಸಚಿವ ಗೋಪಾಲಯ್ಯ ತಿಳಿಸಿದರು.ಒಟ್ಟು ಐದು ತಂಡಗಳಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಜ.11ರಿಂದ 13ರವರೆಗೆ ಸಮಾವೇಶ ನಡೆಯಲಿದ್ದು, ಗ್ರಾಪಂ ಸದಸ್ಯರು ಮುಂದಿನ ದಿನಗಳಲ್ಲಿ ಯಾವ ರೀತಿ ಜನ ಸೇವೆ ಮಾಡಬೇಕೆಂಬುದರ ಬಗ್ಗೆ ಜಾಗೃತಿ ಮೂಡಿಸುವುದೇ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಜ.11ರಂದು ಮೈಸೂರಿನಲ್ಲಿ ಮೊದಲ ಸಮಾವೇಶ ಆರಂಭವಾಗಲಿದೆ. ಈ ಸಮಾವೇಶವನ್ನು ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ರಾಜ್ಯ ಬಿಜೆಪಿ ಅಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಆ ಭಾಗದ ಸಂಸದರು, ಶಾಸಕರು, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರು, ಗ್ರಾಪಂ ಚುನಾವಣೆಯಲ್ಲಿ ಗೆದ್ದಿರುವ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ರಾಜ್ಯದ ಎಲ್ಲ ಕಡೆಯೂ ಈ ಜನಸೇವಕ್ ಸಮಾವೇಶಗಳನ್ನು ಆಯೋಜಿಸಲಾಗುವುದು. ಇದಕ್ಕಾಗಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಉಪಮುಖ್ಯಮಂತ್ರಿಗಳಾದ ಅಶ್ವಥ್ ನಾರಾಯಣ, ಗೋವಿಂದ ಕಾರಜೋಳ, ಸಚಿವರಾದ ಜಗದೀಶ್ ಶೆಟ್ಟರ್, ಕೆ.ಎಸ್.ಈಶ್ವರಪ್ಪ ಹಾಗೂ ಶ್ರೀರಾಮುಲು ನೇತೃತ್ವದಲ್ಲಿ 5 ತಂಡಗಳನ್ನು ರಚನೆ ಮಾಡಲಾಗಿದೆ ಎಂದು ತಿಳಿಸಿದರು.

# ಕೇಂದ್ರದ ವರಿಷ್ಠರು ತಿಳಿಸಿದಾಗ ಸಂಪುಟ ವಿಸ್ತರಣೆ: ಯಡಿಯೂರಪ್ಪ ಸ್ಪಷ್ಟನೆ



ಕೊಪ್ಪಳ,ಜ,09: ಪಕ್ಷದ ಕೇಂದ್ರದ ವರಿಷ್ಠರು ತಿಳಿಸಿದಾಗ ಸಂಪುಟ ವಿಸ್ತರಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ಪಷ್ಟಪಡಿಸಿದ್ದಾರೆ.ಕೊಪ್ಪಳದ ಬಸಾಪುರ ಏರ್ ಸ್ಟ್ರಿಪ್ ನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರೋಕ್ಷವಾಗಿ ಸಂಪುಟ ಪುನರ್ರಚನೆ ಇಲ್ಲ, ಸಂಕ್ರಾಂತಿ ನಂತರ ಸಂಪುಟ ವಿಸ್ತರಣೆ ಆಗಲಿದೆ ಎಂದು ತಿಳಿಸಿದರು.

ರಾಜ್ಯದ ಬಿಜೆಪಿ ಸಚಿವರು, ಶಾಸಕರ ಜೊತೆ ಯುವರಾಜ್ ಫೋಟೋ ತೆಗೆಸಿಕೊಂಡದ್ದು ಅಪರಾಧ ಏನಲ್ಲ. ಆದರೆ ಯುವರಾಜ ಪ್ರಕರಣ ತನಿಖೆ ಹಂತದಲ್ಲಿದೆ. ತನಿಖೆ ಮುಗಿದ ನಂತರ ಸತ್ಯಾಸತ್ಯತೆ ಹೊರಬೀಳಲಿದೆ ಎಂದು ಹೇಳಿದರು.

ಕೋವಿಡ್ ಕಾರಣ, ಅತಿವೃಷ್ಟಿ, ಬರಗಾಲದ ಆಪತ್ತುಗಳಿಂದಾಗಿ ನಿರೀಕ್ಷಿಸಿದಷ್ಟು ಸರಕಾರದಿಂದ ಕೆಲಸ ಮಾಡಲಾಗಿಲ್ಲ. ರಾಜ್ಯದ ಆರ್ಥಿಕ ಸ್ಥಿತಿ ಸರಿ ಇಲ್ಲ. 40-50 ಸಾವಿರ ಬಜೆಟ್ ಖೋತಾ ಆಗಿದೆ. ಇವೆಲ್ಲವೂ ರಾಜ್ಯದ ಜನತೆಗೆ ಗೊತ್ತಿದೆ. ಜನರು ಸರಕಾರಕ್ಕೆ ಸಹಕಾರ ನೀಡಬೇಕು ಎಂದು ವಿವರಿಸಿದರು.

ದೇಶದಲ್ಲಿ ಮೊದಲ ಟಾಯ್ಸ್ ಕ್ಲಸ್ಟರ್ ಕಾರ್ಯಕ್ರಮಕ್ಕೆ ಭೂಮಿ ಪೂಜೆ ಮಾಡುತ್ತಿದ್ದೇನೆ. ಕೆಲಸ ಆರಂಭವಾದ ಬಳಿಕ ಪ್ರಧಾನಿ ಮೋದಿಯವರಿಂದ ಉದ್ಘಾಟನೆ ಮಾಡಿಸುವ ಅಪೇಕ್ಷೆ ಇದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಬಿ.ಸಿ.ಪಾಟೀಲ, ಸಂಸದ ಕರಡಿ ಸಂಗಣ್ಣ, ಶಾಸಕ ಹಾಲಪ್ಪ ಆಚಾರ್, ಪರಣ್ಣ ಮುನವಳ್ಳಿ, ಬಸವರಾಜ ದಡೆಸೂಗುರು ಮತ್ತಿತರರು ಇದ್ದರು.

# 62 ಪ್ರಯಾಣಿಕರಿದ್ದ ಇಂಡೋನೇಷ್ಯಾ ವಿಮಾನ ನಾಪತ್ತೆ

ಜಕಾರ್ತ,ಜ,09: ಜಕಾರ್ತನಿಂದ ಟೇಕ್ ಆಫ್ ಇಂಡೋನೇಷ್ಯಾದ ದೇಶಿಯ ವಿಮಾನವೊಂದು ಶನಿವಾರ ನಾಪತ್ತೆಯಾಗಿದ್ದು, ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಸಂಪರ್ಕ ಕಡಿದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಬೋಯಿಂಗ್ 737-500 ವಿಮಾನವು ಜಕಾರ್ತಾದಿಂದ ಮಧ್ಯಾಹ್ನ 1:56 ಕ್ಕೆ ಟೇಕ್ ಆಫ್ ಆಯಿತು ಮತ್ತು ಮಧ್ಯಾಹ್ನ 2:40 ಕ್ಕೆ ನಿಯಂತ್ರಣ ಕೇಂದ್ರದ ಸಂಪರ್ಕ ಕಳೆದುಕೊಂಡಿತು ಎಂದು ಇಂಡೋನೇಷ್ಯಾದ ಸಾರಿಗೆ ಸಚಿವಾಲಯದ ವಕ್ತಾರ ಅದಿತಾ ಐರಾವತಿ ಅವರು ಹೇಳಿದ್ದಾರೆ.

# ಮಹಾರಾಷ್ಟ್ರ: ಆಸ್ಪತ್ರೆಯಲ್ಲಿ ಭೀಕರ ಅಗ್ನಿ ದುರಂತ, 10 ಮಕ್ಕಳ ಸಾವು




ಮುಂಬೈ, ಜ,09: , ಮಹಾರಾಷ್ಟ್ರದ ಆಸ್ಪತ್ರೆಯಲ್ಲಿ ಸಂಭವಿಸಿದ ಭೀಕರ ಬೆಂಕಿ ಅವಘಡದಲ್ಲಿ ಕನಿಷ್ಠ 10 ಮಕ್ಕಳು ಸಾವನ್ನಪ್ಪಿರುವ ಘಟನೆ ಶನಿವಾರ ಮುಂಜಾನೆ ನಡೆದಿದೆ.

ಮಹಾರಾಷ್ಟ್ರದ ಭಂಡಾರ ಜಿಲ್ಲೆಯ ಜನರಲ್ ಆಸ್ಪತ್ರೆಯಲ್ಲಿ ಈ ಘಟನೆ ಸಂಭವಿಸಿದ್ದು, ರಾತ್ರಿ 2 ಗಂಟೆ ಸುಮಾರಿಗೆ ನವಜಾತ ಶಿಶುಗಳಿದ್ದ ತೀವ್ರ ನಿಗಾಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೆಲವೇ ನಿಮಿಷಗಳಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ವಾರ್ಡ್ ವ್ಯಾಪಿಸಿದ್ದು, ವಾರ್ಡ್ ನಲ್ಲಿದ್ದ 10 ಮಕ್ಕಳು ಸಾವನ್ನಪ್ಪಿವೆ.


ಬೆಂಕಿ ಗೋಚರವಾಗುತ್ತಿದ್ದಂತೆಯೇ ಸಿಬ್ಬಂದಿಗಳು ಬೆಂಕಿ ನಂದಿಸುವ ಕಾರ್ಯಕ್ಕೆ ಮುಂದಾದರು. ಅಲ್ಲದೆ ಶಿಶುಗಳನ್ನು ಬೇರೆಡೆ ರವಾನೆ ಮಾಡುವ ಕಾರ್ಯ ಮಾಡಿದರಾದರೂ, ಅಷ್ಟುಹೊತ್ತಿಗಾಗಲೇ ಬೆಂಕಿ ಕ್ಷಣಮಾತ್ರದಲ್ಲಿ ಇಡೀ ವಾರ್ಡ್ ಅನ್ನು ವ್ಯಾಪಿಸಿತು. ಪರಿಣಾಮ 10 ಮಕ್ಕಳು ಸಾವನ್ನಪ್ಪಿದ್ದರು. ಸಿಬ್ಬಂದಿಗಳ ಹರಸಾಹಸದಿಂದಾಗಿ 7 ಮಕ್ಕಳನ್ನು ರಕ್ಷಿಸಲಾಗಿದೆ. ಮೃತಪಟ್ಟ ಮಕ್ಕಳು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಕಿ ಕಾಣಿಸಿಕೊಂಡುರಿವುದಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ, ಮೇಲ್ನೋಟಕ್ಕೆ ಶಾರ್ಟ್ ಸರ್ಕ್ಯೂಟ್ ಆಗಿರಬಹುದು ಎಂದು ಹೇಳಲಾಗುತ್ತಿದೆ. ಈ ಕುರಿತು ತನಿಖೆ ನಡೆಸಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

**3 ಮಕ್ಕಳು ಬೆಂಕಿಗಾಹುತಿ, 7 ಮಕ್ಕಳು ಉಸಿರುಗಟ್ಟಿ ಸಾವು:** ಇನ್ನು ಈ ಕುರಿತಂತೆ ಮಾಹಿತಿ ನೀಡಿದ ಮಹಾರಾಷ್ಟ್ರ ಆರೋಗ್ಯ ಸಚಿವಾಲಯ ದುರ್ಘಟನೆಯಲ್ಲಿ ಒಟ್ಟು 10 ಮಕ್ಕಳು ಸಾವನ್ನಪ್ಪಿದ್ದು, 3 ಮಕ್ಕಳು ಬೆಂಕಿಗಾಹುತಿದಿವೆ.

ಉಳಿದ 7 ಮಕ್ಕಳು ಬೆಂಕಿಯಿಂದ ಉಂಟಾದ ಹೊಗೆಯಿಂದಾಗಿ ಉಸಿರುಗಟ್ಟಿ ಸಾವನ್ನಪ್ಪಿವೆ ಎಂದು ಮಾಹಿತಿ ನೀಡಿದೆ.

# ‘ಮೇಡ್ ಇನ್ ಇಂಡಿಯಾ’ 2 ಕೋವಿಡ್-19 ಲಸಿಕೆಗಳೊಂದಿಗೆ ಮಾನವೀಯತೆ ರಕ್ಷಣೆಗೆ ಭಾರತ ಸಿದ್ಧವಾಗಿದೆ: ಪ್ರಧಾನಿ ಮೋದಿ



ನವದೆಹಲಿ,ಜ,09: ‘ಮೇಡ್ ಇನ್ ಇಂಡಿಯಾ’ 2 ಕೋವಿಡ್ -19 ಲಸಿಕೆಗಳೊಂದಿಗೆ ಮಾನವೀಯತೆ ರಕ್ಷಣೆಗೆ ಭಾರತ ಸಿದ್ಧವಾಗಿದೆ ಮತ್ತು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬಡವರನ್ನು ಸಬಲೀಕರಣಗೊಳಿಸುವ ಭಾರತದ ಪ್ರಯತ್ನಗಳ ಕುರಿತು ಇಂದು ಇಡೀ ವಿಶ್ವವೇ ಚರ್ಚೆ ಜಗತ್ತು ಚರ್ಚಿಸುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಶನಿವಾರ ಹೇಳಿದ್ದಾರೆ. 16ನೇ ಪ್ರವಾಸಿ ಭಾರತೀಯ ದಿನ ಕಾರ್ಯಕ್ರಮದಲ್ಲಿ ಮಾತನಾಡಿರುವ ಮೋದಿಯವರು, ಮೇಡ್ ಇನ್ ಇಂಡಿಯಾದ 2 ಕೊರೋನಾ ಲಸಿಕೆಗಳೊಂದಿಗೆ ಮಾನವೀಯತೆ ರಕ್ಷಣಗೆ ಭಾರತ ಸಿದ್ಧವಾಗಿದೆ. ಈ ಹಿಂದೆಯೂ ಮಾನವೀಯತೆ ರಕ್ಷಣೆ ಮಾಡುವ ಕಾರ್ಯವನ್ನು ಮಾಡಿತ್ತು. ಈಗಲೂ ಅದನ್ನೇ ಮಾಡುತ್ತಿದೆ ಎಂದು ಹೇಳಿದ್ದಾರೆ.

ಇಂದು ಇಡೀ ವಿಶ್ವ ಭಾರತದ ಲಸಿಕೆಗಳಿಗಾಗಿ ಕಾಯುತ್ತಿರುವುದಷ್ಟೇ ಅಲ್ಲ, ಭಾರತ ಲಸಿಕೆ ಕಾರ್ಯಾಚರಣೆಯನ್ನು ಯಾವ ರೀತಿ ನಡೆಸುತ್ತದೆ ಎಂಬುದರ ಮೇಲೂ ನಿಗಾ ಇಟ್ಟಿದೆ. ಕೊರೋನಾ ಸಾಂಕ್ರಾಮಿಕ ರೋಗ ಭಾರತ ಸಾಕಷ್ಟು ಕಲಿಯುವಂತೆ ಮಾಡಿರಬಹುದು ಆದರೆ, ಸ್ವಾವಲಂಬಿಯಾಗುವಂತೆ ಮಾಡಿರುವುದು ಪ್ರೇರಣೆಯಾಗಿದೆ.

ಭಾರತ ಈ ಹಿಂದೆ ಪಿಪಿಇ ಕಿಟ್, ಮಾಸ್ಕ್, ವೆಂಟಿಲೇಟರ್ ಹಾಗೂ ಟೆಸ್ಟ್ ಕಿಟ್ ಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಇಂದು ಸ್ವಾವಲಂಬಿಯಾಗಿದೆ.ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬಡವರನ್ನು ಸಬಲೀಕರಣಗೊಳಿಸುವ ಭಾರತದ ಪ್ರಯತ್ನಗಳ ಕುರಿತು ಇಂದು ಇಡೀ ವಿಶ್ವವೇ ಚರ್ಚೆ ಜಗತ್ತು ಚರ್ಚಿಸುತ್ತಿದೆ. ಭಯೋತ್ಪಾದನೆ ವಿರುದ್ಧ ಭಾರತ ತಿರುಗಿ ನಿಂತಾಗ ಇಡೀ ವಿಶ್ವಕ್ಕೆ ಸವಾಲು ಎದುರಿಸುವ ಧೈರ್ಯ ಸಿಕ್ಕಂತಾಯಿತು. ಇಂದು ಭಾರತ ಭ್ರಷ್ಟಾಚಾರಕ್ಕೆ ಅಂತ್ಯ ಹಾಡಲು ತಂತ್ರಜ್ಞಾನ ಬಳಕೆ ಮಾಡುತ್ತಿದೆ. ಈ ತಂತ್ರಜ್ಞಾನಗಳ ಮೂಲಕವೇ ಲಕ್ಷ ಮತ್ತು ಕೋಟಿ ಮೌಲ್ಯದ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತಿದೆ.

ಬಡವರ ಸಬಲೀಕರಣಕ್ಕಾಗಿ ಭಾರತದಲ್ಲಿ ನಡೆಯುತ್ತಿರುವ ಅಭಿಯಾನ ಕುರಿತು ಇಂದು ವಿಶ್ವದಾದ್ಯಂತ ಚರ್ಚೆಗಳು ನಡೆಯುತ್ತಿವೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶ ಕೂಡ ಮುನ್ನಡೆ ಸಾಧಿಸಬಹುದು ಎಂಬುದನ್ನು ಭಾರತ ತೋರಿಸಿಕೊಟ್ಟಿದೆ ಎಂದು ತಿಳಿಸಿದ್ದಾರೆ.

ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್‌ನ ಕೋವಿಡ್-19 ಲಸಿಕೆಗಳನ್ನು ತುರ್ತು ಪರಿಸ್ಥಿತಿಯಲ್ಲಿ ಬಳಕೆ ಮಾಡಲು ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅನುಮತಿ ನೀಡಿದ್ದು, ಇನ್ನು ಕೆಲವೇ ದಿನಗಳಲ್ಲಿ ದೇಶದ ಪ್ರತೀಯೊಬ್ಬ ನಾಗರೀಕನಿಗೂ ಲಸಿಕೆ ನೀಡಲಾಗುತ್ತದೆ ಎಂದು ನಿನ್ನೆಯಷ್ಟೇ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಹೇಳಿದ್ದರು.

**ಭಾರತದಲ್ಲಿ ಪ್ರಜಾಪ್ರಭುತ್ವವು ಅತ್ಯಂತ ಪ್ರಬಲವಾಗಿದೆ:** ಭಾರತದ ಪ್ರಜಾಪ್ರಭುತ್ವದ ಬಗ್ಗೆ ಒಂದೊಮ್ಮೆ ಅನುಮಾನಗಳು ವ್ಯಕ್ತವಾಗಿದ್ದವು. ಆದರೆ, ಇಂದು ದೇಶದಲ್ಲಿ ಪ್ರಜಾಪ್ರಭುತ್ವ ಅತ್ಯಂತ ಬಲಶಾಲಿದೆ ಎಂದು ಪ್ರಧಾನಿ ಮೋದಿಯವರು ಹೇಳಿದ್ದಾರೆ.

ಭಾರತ ಸ್ವಾತಂತ್ರ್ಯ ಪಡೆದಾಗ, ಭಾರತದ ಬಡತನದ ರಾಷಅಟ್ರವಾಗಿದ್ದು, ಇಲ್ಲಿನ ಜನರು ಅಷ್ಟು ಸುಶಿಕ್ಷತರಲ್ಲದ ಕಾರಣ ದೇಶದ ಒಡೆದು ಹೋಗಲಿದೆ ಎಂದು ಕೆಲವರು ಭಾವಿಸಿದ್ದರು. ಆದರೆ ಕಾಲ ಕಳೆಯುತ್ತಿದ್ದಂತೆ ನಮ್ಮ ದೇಶ ಹಾಗೂ ನಮ್ಮ ದೇಶದ ಜನರ ಬಗ್ಗೆ ಇದ್ದ ಕಲ್ಪನೆಗಳಲ್ಲಾ ತಪ್ಪು ಎಂದು ಸಾಬೀತಾಯಿತು ಎಂಬುದಕ್ಕೆ ಭಾರತದ ಇತಿಹಾಸವೇ ಸಾಕ್ಷಿಯಾಗಿದೆ.

’ಸಾಹತು ಶಾಹಿ ಆಳ್ವಿಕೆಯಲ್ಲಿ ಸಾಕಷ್ಟು ವಿದ್ವಾಂಸಕರು, ಭಾರತದ ವಿಭಜಿಸದಂತೆ ಎಂದಿಗೂ ಸ್ವತಂತ್ರರಾಗಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಪ್ರಜಾಪ್ರಭುತ್ವ ಸ್ಥಾಪನೆ ಅಸಾಧ್ಯ ಎಂದು ಹೇಳಿದ್ದರು. ಆದರೆ, ಆ ಕಲ್ಪನೆಗಳು ತಪ್ಪೆಂದು ಸಾಬೀತಾಗಿದೆ. ವಾಸ್ತವಾಗಿ ಹೇಳಬೇಕೆಂದರೆ, ಭಾರತ ಏಕೀಕೃತವಾಗಿದೆ. ಇಲ್ಲಿನ ಪ್ರಜಾಪ್ರಭುದ್ವ ಅತ್ಯಂತ ಬಲಶಾಲಿಯಾಗಿದೆ. ಇಂದು ನಮ್ಮ ದೇಶ ಅದ್ಭುತ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ.

ಬಡ ರಾಷ್ಟ್ರವೆಂದು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಸಾಕಷ್ಟು ಜನರು ಹಿಂದೇಟು ಹಾಕುತ್ತಿದ್ದರು. ಆದರೆ, ಭಾರತದ ಬಾಹ್ಯಾಕಾಶದ ಯೋಜನೆ ಹಾಗೂ ನಮ್ಮ ಸ್ಟಾರ್ಟ್ ಅಪ್ ಈಕೋ ಸಿಸ್ಟಮ್ ಇಡೀ ವಿಶ್ವದಲ್ಲಿಯೇ ಅತ್ಯುತ್ತವಾಗಿದೆ. ಕೊರೋನಾ ಸಾಂಕ್ರಾಮಿಕ ಸಂದರ್ಭದಲ್ಲಿಯೂ ನಮ್ಮ ರಾಷ್ಟ್ರ ಸಾಮರ್ಥ್ಯವನ್ನು ಇಡೀ ವಿಶ್ವಕ್ಕೇ ತೋರಿಸಿಕೊಟ್ಟಿದೆ ಎಂದು ಕೊಂಡಾಡಿದ್ದಾರೆ.

### ನಾಳೆಯಿಂದ ‘ಕಲಿಯುತ್ತಾ ನಲಿಯೋಣ’ ಆಕಾಶವಾಣಿಯಲ್ಲಿ ವಿನೂತನ ಕಾರ್ಯಕ್ರಮ: ಸುರೇಶ್ ಕುಮಾರ್

ಬೆಂಗಳೂರು: ಶಿಕ್ಷಣ ಇಲಾಖೆ, ಆಕಾಶವಾಣಿ ಮೂಲಕ ಜನವರಿ 11 ರಿಂದ ಕಲಿಯುತ್ತಾ ನಲಿಯೋಣ” ಎಂಬ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದೆ ಎಂದು ಸಚಿವ ಸುರೇಶ್ ಕುಮಾರ್ ಹೇಳಿದ್ದಾರೆ.ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಇರುವ (ಆದರೆ ಶಾಲೆಗೆ ಹೋಗಲಾರದ) ಮಕ್ಕಳಿಗಾಗಿ ಇರುವ ನಲಿಕಲಿ ಮತ್ತು ಕಲಿನಲಿ ಕಾರ್ಯಕ್ರಮಗಳನ್ನು ನಾಳೆಯಿಂದ ಅಂದರೆ ಜನವರಿ 11ರಿಂದ ಏಪ್ರಿಲ್ 5 ರ ವರೆಗೆ ಆಕಾಶವಾಣಿ ಪ್ರಸಾರ ಮಾಡಲಿದೆ. (ಪ್ರತಿ ವಾರ ಸೋಮವಾರದಿಂದ ಶುಕ್ರವಾರದವರೆಗೂ) ಪ್ರತಿನಿತ್ಯ ಬೆಳಿಗ್ಗೆ 10 ಗಂಟೆಯಿಂದ 10.15 ರ ವರೆಗೆ ಒಂದು ಮತ್ತು ಎರಡನೇ ತರಗತಿಗಳಿಗಾಗಿ ಹಾಗೂ 10:15 ರಿಂದ 10.30 ಗಂಟೆಯವರೆಗೂ 3 ಮತ್ತು 4ನೇ ತರಗತಿಗಳಿಗಾಗಿ ಹಾಡು, ಕಥೆ, ನಾಟಕ, ಸಂಭಾಷಣೆ, ಒಗಟು, ಮತ್ತು ವಿವಿಧ ಆಸಕ್ತಿಕರ ಕಾರ್ಯಕ್ರಮಗಳ ಮೂಲಕ ಆಯಾ ತರಗತಿಗಳ ಮಕ್ಕಳ ಕಲಿಕೆ ಮುಂದುವರಿಯುವಂತೆ ಮಾಡಲು ಶಿಕ್ಷಣ ಇಲಾಖೆ ಈ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಸಚಿವರು ವಿವರಿಸಿದ್ದಾರೆ.

ಈ ಕಾರ್ಯಕ್ರಮಗಳ ಮೂಲಕ ನಲಿ - ಕಲಿಯ ಆಶಯಗಳಾದ ಆಲಿಸುವಿಕೆ, ವಸ್ತು ಗುರುತಿಸುವಿಕೆ, ಸ್ವ ಕಲಿಕೆ, ಸಂತಸದಾಯಕ ಕಲಿಕೆ, ಶಬ್ದ ಪರಿಚಯ... ಹೀಗೆ ಶಬ್ದಗಳ ಏರಿಳಿತದ ಮೂಲಕ ವಿಷಯಗಳನ್ನು ವಿನೂತನ ಮಾದರಿಯಲ್ಲಿ ತಿಳಿಸಲಾಗುತ್ತದೆ. ಒಂದರಿಂದ ನಾಲ್ಕನೇ ತರಗತಿಯವರೆಗೆ ಓದುತ್ತಿರುವ ಮಕ್ಕಳ ಎಲ್ಲಾ ಪೋಷಕರಿಗೆ ಈ ಕಾರ್ಯಕ್ರಮವನ್ನು ಮಕ್ಕಳೊಂದಿಗೆ ಆಲಿಸಬೇಕೆಂದು ಅವರು ಮನವಿ ಮಾಡಿದ್ದಾರೆ. ಮತ್ತು ಅಲ್ಲಿ ಪ್ರಸಾರಗೊಳ್ಳುವ ಹಾಡು, ಕಥೆ ಇತ್ಯಾದಿಗಳನ್ನು ನಿಮ್ಮ ಮಕ್ಕಳಿಗೆ ಮತ್ತೊಮ್ಮೆ ಹೇಳುವುದರ ಮೂಲಕ ಹೇಳಿಸುವ ಮೂಲಕ ಮಕ್ಕಳಿಗೆ ನಲಿಯುವುದರ ಜೊತೆಗೆ ಕಲಿಯುವುದನ್ನು ಅಭ್ಯಾಸ ಮಾಡಿಸಿ. ತಮ್ಮ ಮಕ್ಕಳಿಂದ ಯಾವುದಾದರೂ ಕತೆ ಹಾಡು ಒಗಟು ಹೇಳಬಹುದಾದರೆ ವಾಟ್ಸಾಪ್ ನಂಬರ್ 9449417612 ಗೆ ಕಳಿಸಿದರೆ ಅದನ್ನು ಪ್ರಸಾರ ಮಾಡಲಾಗುವುದು.

## ನುಡಿ-ಮುತ್ತು

ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು. – ಕುವೆಂಪು

ಸಮತೋಲ
ದಿನಾಂಕ 10-01-2021 ರವಿವಾರ

# ಪ್ರಸ್ತುತ ಭಾರತದಲ್ಲಿ ಸ್ತ್ರೀಯರ ಗೌರವ

ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಒಂದು ಗೌರವ ಶ್ರದ್ಧೆ ಇದೆ. ಕಾಲಕ್ಕನುಗುಣವಾಗಿ ಸ್ತ್ರೀಯರ ಮೇಲಿದ್ದ ಪೂಜ್ಯತೆಯ ಮನೋಭಾವನೆ ಕಡಿಮೆಯಾಗುತ್ತ ಬರುತ್ತಿರುವದು ದುರದೃಷ್ಟಕರ.

ಪ್ರಾಚೀನ ವೇದಗಳ ಕಾಲದಲ್ಲಿ ಸ್ತ್ರೀಯರನ್ನು ಅಂದಿನ ಸಮಾಜ ಉನ್ನತ ಸ್ಥಾನದಲ್ಲಿ ಕುಳ್ಳಿರಿಸಿತ್ತು. ಸ್ತ್ರೀಯರನ್ನು ದೇವತೆ ಎಂದು ತಿಳಿದಿದ್ದರು. ಸ್ತ್ರೀಯರನ್ನು ತೃಪ್ತಿ ಪಡಿಸುವದೇ ಒಂದು ಪುಣ್ಯದ ಕಾರ್ಯ ಎಂದು ವೇದಗಳ ಕಾಲದಲ್ಲಿ ಪರಿಗಣಿಸಲಾಗುತ್ತಿತ್ತು. ಆ ಕಾಲವು ಸ್ತ್ರೀಯರಿಗೆ ಒಂದು ಸುವರ್ಣ ಯುಗವಾಗಿತ್ತು. ವಿಷಾದನೀಯ ಸಂಗತಿ ಎಂದರೆ ಕಾಲಕ್ಕನುಗುಣವಾಗಿ ಸ್ತ್ರೀಯರ ಮೇಲಿದ್ದ ಆದರ ಅಭಿಮಾನ ಕಡಿಮೆಯಾಗುತ್ತಿದೆ.

ಆಧುನಿಕ ಭಾರತದಲ್ಲಿ ಸ್ತ್ರೀಯರ ಮೇಲೆ ಇದ್ದ ಪೂಜ್ಯ ಭಾವನೆ ಕಡಿಮೆಯಾಗುತ್ತಿದೆ.ಪ್ರಸ್ತುತ ಭಾರತದಲ್ಲಿ ಸ್ತ್ರೀಯರಿಗೆ ಮೊದಲು ಇದ್ದ ಅಡೆ ತಡೆ ಇಲ್ಲ. ಸ್ತ್ರೀ ಇಂದು ಸಾರ್ವಜನಿಕ ಎಲ್ಲಾ ರಂಗಗಳಲ್ಲಿ ಪ್ರವೇಶ ಪಡೆದು ಪಕ್ಷಿಯಂತೆ ಸ್ವತಂತ್ರವಾಗಿದ್ದಾಳೆ ಹಾಗೂ ಸ್ವಾವಲಂಬಿಯಾಗಿದ್ದಾಳೆ ಎನ್ನುವದೇನೋ ನಿಜ.

ಇಂದು ಸ್ತ್ರೀ ಕಾರ್ಯಾಲಯದಲ್ಲಿ ಗುಮಾಸ್ತೆಯಿಂದ ಹಿಡಿದು ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನ ಮಂತ್ರಿ ಪದವಿಯನ್ನು ಏರಿದ್ದಾರೆ. ಹೀಗೆ ಸ್ತ್ರೀಯರ ಸ್ಥಾನವೇನೋ ಉನ್ನತ ಮಟ್ಟಕ್ಕೆ ಏರಿದೆ. ಅದಕ್ಕೆ ಪ್ರತಿಯಾಗಿ ಶ್ರದ್ಧೆ ಇಳಿಮುಖವಾಗುತ್ತಿದೆ ಎಂಬುದು ಗೋಚರವಾಗುತ್ತಿದೆ.ಸಮಾಜ ಇಂದು ಸ್ತ್ರೀಯನ್ನು ಒಳ್ಳೆಯ ದೃಷ್ಟಿಯಿಂದ ಕಾಣುವದು ಕಡಿಮೆಯಾಗಿದೆ. ಪರಿಣಾಮ ವಾಗಿ ವರದಕ್ಷಿಣೆಗೆ ಮಹಿಳೆ ಬಲಿ, ಮಹಿಳೆ ಮೇಲೆ ಅತ್ಯಾಚಾರ, ವಿವಾಹ ವಿಚ್ಛೇದನ ಇನ್ನಿತರ ಘಟನೆಗಳು ಸಂಭವಿಸುತ್ತಿವೆ.

ಇವು ಸ್ತ್ರೀಯರ ಮೇಲೆ ಸಮಾಜದ ಆದರಾಭಿಮಾನ ಇಲ್ಲ ಎನ್ನುವದಕ್ಕೆ ಪುಷ್ಟಿ ನೀಡುತ್ತವೆ. ಇಂದು ಸ್ತ್ರೀ ಒಂಟಿಯಾಗಿ ತಿರುಗಾಡುವದು ಅಪರೂಪ. ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಒಂಟಿಯಾಗಿದ್ದರೆ ಸುರಕ್ಷಿತವಾಗಿ ಮರಳಿ ಮನೆಗೆ ಬರುವದು ಸಹ ಕಷ್ಟಕರ.ಈ ರೀತಿ ಸ್ತ್ರೀಯರ ಮೇಲಿನ ಆ ಗೌರವಕ್ಕೆ ಹಾಗೂ ಕೆಟ್ಟ ದೃಷ್ಟಿಗೆ ಕಾರಣಗಳು ಇಲ್ಲವೆಂತಲ್ಲ.

# ತಲೆಹೊಟ್ಟು ಸಮಸ್ಯೆಗೆ ನಿಂಬೆ ಹಣ್ಣಿನಿಂದ ಪರಿಹಾರ



ತಲೆ ಹೊಟ್ಟಿನಿಂದಾಗಿ ಕೇಶರಾಶಿಗಳು ಅಧಿಕವಾಗಿ ಉದುರುವುದು, ತುರಿಕೆ, ಉರಿಯೂತಗಳು ಉಂಟಾಗುತ್ತವೆ. ಇಂತಹ ಒಂದು ಸಮಸ್ಯೆಯನ್ನು ಯಾವುದೇ ಔಷಧಗಳ ಬಳಕೆಯಿಲ್ಲದೆ ನೈಸರ್ಗಿಕ ಉತ್ಪನ್ನವಾದ ನಿಂಬೆ ಹಣ್ಣಿನಿಂದ ಸುಲಭವಾಗಿ ನಿವಾರಿಸಬಹುದು.

**ನಿಂಬೆ ರಸ ಮತ್ತು ನೆಲ್ಲಿಕಾಯಿ** ನಿಂಬೆ ರಸದಲ್ಲಿ ಇರುವ ಸಿಟ್ರಿಕ್ ಆಮ್ಲವು ಸೋಂಕುಗಳ ವಿರುದ್ಧ ಹೋರಾಡಲು ಸಹಾಯ ಮಾಡುವುದು. ಇದು ತಲೆ ಹೊಟ್ಟಿನ ನಿವಾರಣೆಯ ಜೊತೆಗೆ ಕೂದಲುಗಳಿಗೆ ಬೇರಿನಿಂದಲೇ ಆರೈಕೆ ಮಾಡುವುದು. ಇದರೊಂದಿಗೆ ನೆಲ್ಲಿಕಾಯಿಯ ರಸವನ್ನು ಸೇರಿಸುವುದರಿಂದ ಸಿಟ್ರಿಕ್ ಆಮ್ಲದ ಶಕ್ತಿ ದ್ವಿಗುಣವಾಗುತ್ತದೆ. ಅದು ಸತ್ತ ಜೀವಕೋಶಗಳನ್ನು ನಾಶಮಾಡಿ ಆರೋಗ್ಯಕರ ಕೂದಲು ಬೆಳವಣಿಗೆಗೆ ಪ್ರೇರೇಪಿಸುವುದು.

**ವಿಧಾನ:** – ಮೊದಲಿಗೆ ಎರಡು ಟೇಬಲ್ ಚಮಚ ನಿಂಬೆ ರಸ ಹಾಗೂ ಎರಡು ಟೇಬಲ್ ಚಮಚ ನೆಲ್ಲಿ ಕಾಯಿ ರಸವನ್ನು ತೆಗೆದುಕೊಳ್ಳಬೇಕು.

– ಒಂದು ಬೌಲ್ ಅಲ್ಲಿ ಎರಡು ರಸಗಳ ಮಿಶ್ರಣವನ್ನು ಮಾಡಿ.
– ಸ್ವಚ್ಛವಾದ ಹತ್ತಿ ಉಂಡೆಯನ್ನು ಮಿಶ್ರಣದಲ್ಲಿ ಅದ್ದಿ, ನೆತ್ತಿಯ ಭಾಗ ಹಾಗೂ ಪೀಡಿತ ಪ್ರದೇಶಗಳಿಗೆ ಅನ್ವಯಿಸಬೇಕು.
– ಮಿಶ್ರಣವನ್ನು 30 ನಿಮಿಷಗಳ ಕಾಲ ಆರಲು ಬಿಡಿ.
– ಬಳಿಕ ಮೃದುವಾದ ನೀರಿನಿಂದ ಸ್ವಚ್ಛಗೊಳಿಸಿ.
– ವಾರದಲ್ಲಿ ಎರಡುಬಾರಿ ಈ ಕ್ರಮವನ್ನು ಅನುಸರಿಸುವುದರ ಮೂಲಕ ಉತ್ತಮ ಫಲಿತಾಂಶ ಪಡೆಯಬಹುದು.

# ಹಕ್ಕಿ ಜ್ವರ: ಈ ಸಮಯದಲ್ಲಿ ಚಿಕನ್, ಮೊಟ್ಟೆ ತಿನ್ನಬಹುದೇ?





ಇದೀಗ ಹಕ್ಕಿ ಜ್ವರ ಭೀತಿ ಶುರುವಾಗಿದೆ. ಹಿಮಾಚಲ ಪ್ರದೇಶ, ರಾಜಸ್ಥಾನ, ಕೇರಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಹಕ್ಕಿ ಜ್ವರ ಈಗಾಗಲೇ ವೇಗವಾಗಿ ಹರಡುತ್ತಿದ್ದು ಕರ್ನಾಟಕದಲ್ಲಿ ಕೂಡ ಇದರ ಕುರಿತು ಸರ್ಕಾರ ಎಚ್ಚರಿಕೆಯನ್ನು ರವಾನಿಸಿದೆ. ಕೇರಳದಲ್ಲಿ ಕೋಳಿ, ಬಾತುಕೋಳಿ ಸೇರಿದಂತೆ 21000ಕ್ಕೂ ಹೆಚ್ಚು ಹಕ್ಕಿಗಳು ಸಾವನ್ನಪ್ಪಿವೆ. ಕರ್ನಾಟಕದಲ್ಲಿ ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಕೊಡಗು ಸೇರಿದಂತೆ ಹಲವು ಕಡೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಪಶುಸಂಗೋಪನೆ ಇಲಾಖೆ ನಿರ್ದೇಶನ ನೀಡಿದೆ. ಹಕ್ಕಿ ಜ್ವರ ತಡೆಗಟ್ಟುವುದು ಎಂದರೆ ಸುತ್ತಮುತ್ತಲಿನ ಎಚ್5ಎನ್ ವೈರಸ್‌ಗಳನ್ನು ನಾಶಪಡಿಸುವುದಾಗಿದೆ. ಈ ವೈರಸ್ ಹರಡದಂತೆ ತಡೆಗಟ್ಟಲು ಹಕ್ಕಿ ಜ್ವರ ಕಂಡು ಬಂದ ಸುತ್ತ ಮುತ್ತಲಿನ ಪ್ರದೇಶದ ಕೋಳಿಗಳನ್ನು ಕೊಲ್ಲಲಾಗುವುದು. ಹಕ್ಕಿ ಜ್ವರ ಬಂದಾಗ ಕೋಳಿ ತಿನ್ನಬಹುದೇ ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತದೆ.

**ಕೋಳಿ ಮಾಂಸ ತಿನ್ನುವುದರಿಂದ ರೋಗ ಹರಡುವ ಸಾಧ್ಯತೆ ಇದೆಯೇ?** ಈ ಸಮಯದಲ್ಲಿ ಮಾಂಸ- ಮೊಟ್ಟೆ ತಿನ್ನುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳೇನು ಎಂಬುವುದರ ಬಗ್ಗೆ ಮಾಹಿತಿ ಇಲ್ಲಿದೆ. ಚಿಕನ್ ಮತ್ತು ಪೌಲ್ಟ್ರಿ ಆಹಾರ ವಸ್ತುಗಳನ್ನು ಸೇವಿಸುವುದಾದರೆ ಚೆನ್ನಾಗಿ ಬೇಯಿಸಿ ತಿನ್ನಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಚಿಕನ್, ಬಾತು ಕೋಳಿ, ಟರ್ಕಿ ಮುಂತಾದ ಪೌಲ್ಟ್ರಿ ಆಹಾರ ವಸ್ತುಗಳನ್ನು 70 ಡಿಗ್ರಿಅಗಿಂತ ಅಧಿಕ ಉಷ್ಣತೆಯಲ್ಲಿ ಬೇಯಿಸಬೇಕು. ಮಾಂಸ ಹಸಿ ಇರಬಾರದು. ಚೆನ್ನಾಗಿ ಬೇಯಸಿದ ಮಾಂಸಾಹಾರ ಸೇವಿಸಿ ರೋಗ ಹರಡಿರುವ ಯಾವುದೇ ಉದಾಹರಣೆಗಳಿಲ್ಲ, ಆದ್ದರಿಂದ ಈ ಸಮಯದಲ್ಲಿ ಮಾಂಸಾಹಾರ ಮಾಡುವಾಗ ತುಂಬಾ ಬೇಯಿಸಿ ತಿನ್ನಿ.

**ಮೊಟ್ಟೆಯಲ್ಲಿ ವೈರಸ್ ಇರುತ್ತದೆಯೇ?** ಸಾಮಾನ್ಯವಾಗಿ ಹಕ್ಕಿ ಜ್ವರ ಬಂದ ಕೋಳಿಗಳು ಮೊಟ್ಟೆ ಇಡುವುದನ್ನು ನಿಲ್ಲಿಸುತ್ತದೆ. ಒಂದು ವೇಳೆ ಮೊಟ್ಟೆ ಇಟ್ಟರೆ ಮೊಟ್ಟೆಯ ಸಿಪ್ಪೆ ಹಾಗೂ ಒಳ ಭಾಗದಲ್ಲಿ ವೈರಸ್ ಇರುವ ಸಾಧ್ಯತೆ ಇದೆ. ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ತಿಂದರೆ ಹೆದರಬೇಕಾಗಿಲ್ಲ.

**ಈ ಸಮಯದಲ್ಲಿ ಯಾವ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು:**

* ಕಾಯಿಲೆ ಇರುವ ಪ್ರಾಣಿಗಳು ಆಹಾರ ಸರಪರಳಿಯೊಳಗೆ ಸೇರದಂತೆ ನೋಡಿಕೊಳ್ಳಬೇಕು, ಅಂದರೆ ಒಂದು ಪ್ರದೇಶದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡರೆ ಅದು ಹರಡದಂತೆ ನೋಡಿಕೊಳ್ಳಬೇಕು.




* ಪ್ರಾಣಿ ರಕ್ತ ಕುಡಿಯುವುದು, ಮಾಂಸವನ್ನು ಸರಿಯಾಗಿ ಬೇಯಿಸದೇ ತಿನ್ನುವುದು ಮಾಡಬಾರದು, ಅಲ್ಲದೆ ಈ ಸಮಯಲ್ಲಿ ಹಸಿ ಮೊಟ್ಟೆ ಸೇವಿಸಬೇಡಿ.

* ಈ ಸಮಯದಲ್ಲಿ ರೆಡಿ ಟು ಕುಕ್ ಮಾಂಸಾಹಾರ ವಸ್ತುಗಳನ್ನು ಬಳಸದೇ ಇರುವುದು ಒಳ್ಳೆಯದು. ಆಹಾರವನ್ನು ಚೆನ್ನಾಗಿ ಬೇಯಿಸಿದರೆ ಅದರಲ್ಲಿರುವ ವೈರಸ್ ಅನ್ನು ನಿಷ್ಕ್ರಿಯೆಗೊಳಿಸಬಹುದು.

**ಹಕ್ಕಿ ಜ್ವರ ಕಂಡು ಬಂದ ಪ್ರದೇಶದವರು ಏನು ಮಾಡಬೇಕು?** ಹಕ್ಕಿ ಜ್ವರ ಕಂಡು ಬಂದ ತಕ್ಷಣ ಎಲ್ಲಾ ಕೋಳಿಗಳನ್ನು ಕೊಲ್ಲಬೇಕು, ಈ ಪ್ರದೇಶಕ್ಕೆ ಭೇಟಿ ನೀಡುವವರು ತಮಗೆ ರೋಗ ಹರಡುವುದನ್ನು ತಡೆಗಟ್ಟಲು ಏಳು ದಿನ ಟ್ಯಾಮಿಫ್ಲೂ ಮಾತ್ರೆ ಸೇವಿಸಬೇಕು, ಇದನ್ನು ಕಾಯಿಲೆ ಹರಡುವ ಮುಂಚಿತವಾಗಿಯೇ ತೆಗೆದುಕೊಳ್ಳಬೇಕು. ಕೋಳಿ ಸಾಕುವವರಿಗೆ ಹಕ್ಕಿ ಜ್ವರದ ಕುರಿತು ತಿಳುವಳಿಕೆ ಮೂಡಿಸಬೇಕು, ಕೋಳಿ ಸಾಕುವ ಪ್ರದೇಶವನ್ನು ಸ್ವಚ್ಛವಾಗಿ ಕಾಪಾಡಬೇಕು.

ಹಕ್ಕಿ ಜ್ವರದಿಂದ ಸತ್ತ ಕೋಳಿಯನ್ನು ಗುಂಡಿ ತೋಡಿ ಸುಣ್ಣ ಹಾಕಿ ನಂತರ ಮಣ್ಣು ಹಾಕಿ ಮುಚ್ಚಬೇಕು. ಹಕ್ಕಿ ಜ್ವರ ಕಂಡು ಬಂದಿರುವ ಈ ಸಮಯದಲ್ಲಿ ಯಾರಿಗಾದರೂ ಜ್ವರ ಕಾಣಸಿದರೆ ಕೂಡಲೇ ಆಸ್ಪತ್ರೆಗೆ ಕೊಂಡೊಯುದ್ದು ಚಿಕಿತ್ಸೆ ಕೊಡಿಸಬೇಕು.



# ನಿಮ್ಮ ಮಗುವನ್ನು ಜವಾಬ್ದಾರಿಯುತ ಮನುಷ್ಯನಾಗಿಸಲು ಹೀಗೆ ಬೆಳೆಸಿ

ಮುಗ್ಧ ಮನಸ್ಸಿನ ಮಗುವೆಂದರೆ ಹಾಗೇನೇ. ಆ ಮಗುವಿನ ಮನಸ್ಸು ಒಂದು ಬಿಳಿ ಹಾಳೆಯಿದ್ದಂತೆ. ಜೀವನದ ಉದ್ದೇಶವೇನು, ಜೀವನದ ಸಾರ್ಥಕತೆ ಎಲ್ಲಿ ಅಡಗಿದೆ, ಅಂತಹ ಉದ್ದೇಶ, ಸಾರ್ಥಕತೆಯನ್ನ ಸಾಧಿಸೋದು ಹೇಗೆ ಅನ್ನೋದರ ಕುರಿತ ಮಾರ್ಗದರ್ಶೀ ವಾಕ್ಯಗಳನ್ನ ಹೆತ್ತವರು ಅಂತಾ ಅನಿಸಿಕೊಂಡಿರೋ ನಾವುಗಳೇ ಆ ಮಗುವಿನ ಮನಸ್ಸೆಂಬ ಬಿಳಿ ಹಾಳೆಯ ಮೇಲೆ ಬರೆಯಬೇಕಾಗುತ್ತದೆ. ಅರ್ಥಾತ್ ನಮ್ಮ ಆಚಾರ ವಿಚಾರಗಳಿಗೆ ತಕ್ಕ ಹಾಗೆ ಬೆಳೆಯುತ್ವೆ ಮಕ್ಕಳು!! ಹಾಗಾಗಿ ಮಕ್ಕಳನ್ನ ಯೋಗ್ಯ ವಯಸ್ಕರನ್ನಾಗಿಸೋದಕ್ಕಾಗಿ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡೋದು ಹೆತ್ತವರ ಆದ್ಯ ಕರ್ತವ್ಯ. ಹಾಗಾದರೆ ಮಕ್ಕಳನ್ನ ಜವಾಬ್ದಾರಿಯುತ ನಾಗರೀಕರನ್ನಾಗಿ ಹೇಗೆ ಬೆಳೆಸೋದು ಅನ್ನೋದರ ಬಗ್ಗೆ, ಹಾಗೆ ಬೆಳೆಸೋದರ ಕೆಲವು ವಿಧಾನಗಳ ಬಗ್ಗೆ ಈ ಕೆಳಗೆ ಚರ್ಚಿಸಲಾಗಿದೆ: ಬೆಳೆಯುವ ಮಕ್ಕಳ ಪಾಲಿಗೆ ಅವರ ಹೆತ್ತವರೇ ಅವರಿಗೆ ರೋಲ್ ಮಾಡೆಲ್! ಹೆತ್ತವರು ತಮ್ಮ ಜೀವನದಲ್ಲಿ ಶಿಸ್ತು, ವಿನಯಶೀಲತೆ, ಹಾಗೂ ಕಟ್ಟುಪಾಡುಗಳನ್ನ ಅಳವಡಿಸಿಕೊಂಡು, ತಮ್ಮ ದಿನದಿನದ ಜವಾಬ್ದಾರಿಗಳನ್ನ ಅಚ್ಚುಕಟ್ಟಾಗಿ ತಾವೇ ನಿರ್ವಹಿಸುತ್ತಾ ಬಂದರೆ, ಮಕ್ಕಳು ಕನ್ನಡಿಯಂತೆ ಆ ಹೆತ್ತವರ ಅಂತಹ ನಡವಳಿಕೆಗಳನ್ನೇ ಪ್ರತಿಫಲಿಸುತ್ತಾರೆ. ಒಂದೊಮ್ಮೆ ಹೆತ್ತವರು ಜವಾಬ್ದಾರಿಯಿಲ್ಲದವರಾಗಿದ್ದು, ವ್ಯರ್ಥ ಕಾಲಹರಣ ಮಾಡುವವರಾಗಿದ್ದು, ಒರಟರೂ, ಕೋಪಿಷ್ಟರೂ ಆಗಿದ್ದರೆ ಮಕ್ಕಳೂ ಕೂಡ ಅವರಂತೆಯೇ ಆಗುತ್ತಾರೆ!!

**ಮಕ್ಕಳ ನಡವಳಿಕೆಯನ್ನ ರೂಪಿಸುವುದು ಹೇಗೆ?** ಮಾನವ ಜೀವನದಲ್ಲಿ ಬಾಲ್ಯವೇ ಆತನನ್ನೋ ಅಥವಾ ಆಕೆಯನ್ನೋ ಭಾವೀ ವ್ಯಕ್ತಿಯನ್ನಾಗಿ ರೂಪುಗೊಳಿಸುವ ಹಂತವಾಗಿರುತ್ತದೆ. ತಮ್ಮ ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಪುಟ್ಟಮಕ್ಕಳಿಗೆ ಎಲ್ಲಿಲ್ಲದ ಕೌತುಕ ತುಂಬಿರುತ್ತದೆ. ಖಚಿತ ವೇಳಾಪಟ್ಟಿಗನುಗುಣವಾದ ದಿನಚರಿ ಹಾಗೂ ಶಿಸ್ತುಬದ್ಧ ಜೀವನಕ್ರಮದೊಂದಿಗೆ ಅವರ ಕೌತುಕ ಮನಸ್ಸಿಗೆ ಮಾರ್ಗದರ್ಶನ ಮಾಡಬೇಕಾದ ಅಗತ್ಯವಿರುತ್ತದೆ. ಮಕ್ಕಳಿಗೆ "ಹೀಗ್ ಮಾಡು, ಹಾಗ್ ಮಾಡು" ಅಂತೆಲ್ಲ ಆರ್ಡರ್ ಮಾಡೋವಾಗ, ಅಂತಹ ಆರ್ಡರ್ ಗಳ ಹಿಂದಿನ ಉದ್ದೇಶಗಳನ್ನ ಹೆತ್ತವರು ಮಕ್ಕಳಿಗೆ ಸ್ಪಷ್ಟವಾಗಿ ವಿವರಿಸಬೇಕು. ಹಾಗೆ ಮಾಡಿದಾಗ ಮಾತ್ರ ಮುಂಬರುವ ಜೀವನದಲ್ಲಿ ಮಕ್ಕಳಲ್ಲಿ ಶಿಸ್ತನ್ನ ಅಳವಡಿಸಿಕೊಳ್ಳೋದಕ್ಕೆ ಅದು ನೆರವಾಗಬಲ್ಲದು. ಮಕ್ಕಳೊಂದಿಗೆ ದ್ವೇಷಪೂರಿತ ವರ್ತನೆ ಬೇಡ ಮಗ ಅಥವಾ ಮಗಳು ಶಾಲೆಯಿಂದ ಲೇಟಾಗಿ ಬಂದ ಅಥವಾ ಬಂದ್ಲು ಅಂತಾನೋ ಇಲ್ಲವೇ ಕತ್ತಲಾದ ಮೇಲೂ ಹೊರ್ಗಡೆ ಆಟ ಆಡ್ತಾ ಇದ್ದ ಅಥವಾ ಇದ್ಲು ಅನ್ನೋ ಕಾರಣಕ್ಕಾಗಿನೋ ಆತನಿಗೆ ಅಥವಾ ಆಕೆಗೆ ಸಿಕ್ಕಾಪಟ್ಟೆ ಬಯ್ಯೋ ಬದ್ಲು, ಹೊತ್ತುಮುಳುಗಿದ ಮೇಲೂ ಹೊರ್ಗಡೆ ಆಟ ಆಡ್ತಾ ಇರೋದು ಯಾಕೆ ಸುರಕ್ಷಿತ ಅಲ್ಲ ಅನ್ನೋದನ್ನ ಆತನಿಗೆ ಅಥವಾ ಆಕೆಗೆ ಶಾಂತವಾಗಿ ವಿವರಿಸೋದು ಒಳ್ಳೇದು. ಅವರನ್ನ ಹೆದರ್ಸೋದಕ್ಕಂತೂ ಖಂಡಿತಾ ಹೋಗ್ಬೇಡಿ. ಹಾಗ್ ಮಾಡಿದ್ರೆ ನಿಮ್ಮ ಮತ್ತು ನಿಮ್ಮ ಮಕ್ಕಳ ನಡುವಿನ ಸಂಬಂಧ ನಕಾರಾತ್ಮಕ ರೂಪವನ್ನ ಪಡ್ಕೊಳ್ಳತ್ತೆ. ಒಂದಿಷ್ಟು ತಪ್ಪುಗಳನ್ನ ಮಾಡಿ, ಆ ಮೇಲೆ ಆ ತಪ್ಪುಗಳಿಂದ್ಲೇ ಅನುಭವದ



ಪಾಠ ಕಲಿತುಕೊಳ್ಳೋವಂತ ಅವಕಾಶಗಳನ್ನ ಮಕ್ಳಿಗೂ ಅಷ್ಟು ಇಷ್ಟು ಕೊಡ್ಬೇಕು. ಆದ್ರೆ ಅಂತಹ ಅನುಭವಗಳು ಮಕ್ಳಿಗೆ ಗಂಭೀರ ಸ್ವರೂಪದ ಹಾನಿಯನ್ನ ಮಾಡೋವಂತಹವು ಆಗಿರ್ಬಾರ್ದು ಅಷ್ಟೇ... ಒಳ್ಳೆಯ



ನಡವಳಿಕೆಗಳಿಗೆ ಪ್ರಶಂಸಿಸೋದನ್ನ ಮರೀಬೇಡಿ ತಾವು ಕೈಗೊಳ್ಳೋ ಚಟುವಟಿಕೆಗಳಿಗೆ ಸಮ್ಮತಿಯನ್ನ, ಪ್ರಶಂಸೆ, ಪ್ರೋತ್ಸಾಹಗಳನ್ನ ತಾವು ಆದರ್ಶವಾಗಿಟ್ಟುಕೊಂಡಿರೋ ತಂದೆ-ತಾಯಿಗಳಿಂದ ಮಕ್ಕಳು ನಿರೀಕ್ಷಿಸುತ್ತಾರೆ. ಮಗು ಒಂದು ಚಿತ್ರವನ್ನ ಬಿಡಿಸಬಹುದು, ಒಂದು ಕವನವನ್ನ ಬರೆಯಬಹುದು, ಅಥವಾ ತನ್ನ ಮನೆಗೆಲಸಾನಾ ನಿಗದಿತ ಸಮಯದೊಳಗೆ ಮುಗಿಸಿಬಿಡಬಹುದು.

"ದೊಡ್ಡೋರ ಹಾಗೆ ನಾವೂ ಕೂಡ ಅಷ್ಟೋ ಇಷ್ಟೋ ನಮ್-ನಮ್ ಕೆಲ್ಸಗಳನ್ನ ನಾವೇ ಮಾಡ್ಕೋತೀವಿ" ಅನ್ನೋದನ್ನ ಸಾಬೀತು ಮಾಡಿ ರೀತಿಯಲ್ಲಿ ಕೆಲವೊಂದು ಸಲ ಅವರು ಪಾತ್ರೆಗಳನ್ನ ತೊಳೆದಾರು, ತಮ್ಮ ಹಾಸಿಗೆಗಳನ್ನ ತಾವೇ ಹಾಸಿಕೊಂಡಾರು. ಅಂತಹ ಸಂದರ್ಭಗಳಲ್ಲಿ ಹೆತ್ತವರು ಅವರ ಬೆನ್ನುತಟ್ಟೋದರ ಮೂಲಕ ಅವರ ಕೆಲಸಕಾರ್ಯಗಳನ್ನ ಪ್ರೋತ್ಸಾಹಿಸಬೇಕು. ಜೀವನ ಮೌಲ್ಯಗಳ ಬೋಧನೆ ಉದಾತ್ತ ಮೌಲ್ಯಗಳನ್ನ ಅಳವಡಿಸಿಕೊಂಡಿರೋ ವ್ಯಕ್ತಿಗಳಲ್ಲಿ ಗೌರವಯುತವಾದ ಹಾಗೂ ವಿನಯಶೀಲ ಗುಣಗಳು ಮನೆಮಾಡಿಕೊಂಡಿರುತ್ತವೆ. ಹಾಗಾಗಿ ಗುರುಹಿರಿಯರಿಗೆ ಗೌರವ ಕೊಡೋದನ್ನ ಸಾಮಾನ್ಯವಾಗಿ ಎಲ್ಲ ತಂದೆತಾಯಿಗಳೂ ತಮ್ಮ ಮಕ್ಕಳಿಗೆ ಕಲಿಸಿಕೊಡಬೇಕು.

ಪ್ರಾಣಿ, ಪಕ್ಷಿಗಳ ವಿಚಾರದಲ್ಲೂ ಮಕ್ಕಳು ದಯೆ, ಕರುಣೆ, ಅನುಕಂಪ, ಸಹಾನುಭೂತಿಯಂತಹ ಭಾವನೆಗಳನ್ನ ಬೆಳೆಸಿಕೊಂಡಿರಬೇಕು.

ಪಶುಪಕ್ಷಿಗಳ ಹಾಗೂ ಗಿಡಮರಗಳ ಬಗ್ಗೆ ಕಾಳಜಿಯುತ ಭಾವನೆ ಇದ್ದಲ್ಲಿ, ಅಂತಹ ಮಕ್ಕಳು ಇತರರ ವಿಚಾರದಲ್ಲಿಯೂ ಸಹಿಷ್ಣುತಾ ಗುಣವುಳ್ಳವರಾಗಿ ಬೆಳೆಯುತ್ತಾರೆ. ಇಂತಹ ಗುಣಗಳು ಮಕ್ಕಳಲ್ಲಿ ನಿಸ್ವಾರ್ಥತೆಯನ್ನ ಪ್ರೋತ್ಸಾಹಿಸುತ್ತವೆ ಹಾಗೂ ಇತರರ ಪಾಲಿಗೆ ಸುರಕ್ಷಿತ ಪ್ರಪಂಚವನ್ನ ರೂಪಿಸೋದಕ್ಕೆ ಅವರನ್ನ ಶಕ್ತರನ್ನಾಗಿ ಮಾಡುತ್ತವೆ.



# ಮೊಣಕೈ-ಮೊಣಕಾಲು ಟ್ಯಾನಿಂಗ್ ತೆಗೆಯಲು ಇಲ್ಲಿದೆ ಮನೆಮದ್ದಿನ ಪರಿಹಾರ

ನಿಮ್ಮ ಮೊಣಕೈ ಮತ್ತು ಮೊಣಕಾಲುಗಳು ಕಪ್ಪಾಗಿ ಮತ್ತು ಗಟ್ಟಿಯಾಗಿ ಕಾಣುತ್ತವೆಯೇ? ಡಾರ್ಕ್ ಮೊಣಕಾಲುಗಳು ಮತ್ತು ಮೊಣಕೈಗಳೆಂದರೆ ಸೂರ್ಯನ ತೀವ್ರ ಶಾಖ, ಡೆಡ್ ಸೆಲ್ ಗಳ ಸಂಗ್ರಹವಾಗಿದೆ. ನಿಮ್ಮ ದೇಹದ ಈ ಭಾಗವು ಯಾವುದೇ ತೈಲ ಗ್ರಂಥಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಅವು ಸುಲಭವಾಗಿ ಒಣಗುತ್ತವೆ. ಈ ಡಾರ್ಕ್ ಆಗಿರುವ ಮೊಣ ಕೈ ಹಾಗೂ ಮೊಣಕಾಲುಗಳು ನಿಮ್ಮ ಸೌಂದರ್ಯವನ್ನು ಕಡಿಮೆ ಮಾಡುತ್ತದೆ. ಇದರಿಂದ ನೀವು ಸಾಕಷ್ಟು ಮುಜುಗರವನ್ನು ಅನುಭವಿಸಿರಬಹುದು. ಸೂರ್ಯನಿಂದಾದ ಈ ಚರ್ಮ ಸಮಸ್ಯೆಯನ್ನು ನಿಮ್ಮ ಸಾಮಾನ್ಯ ಸೋಪಿನ ಸ್ಕ್ರಬಿಂಗ್ ಹೋಗಲಾಡಿಸುವುದಿಲ್ಲ. ಮೊಣಕೈ ಮತ್ತು ಮೊಣಕಾಲುಗಳ ಚರ್ಮದ ಟೋನ್ ಅನ್ನು ಹಗುರಗೊಳಿಸಲು ಸಹಾಯ ಮಾಡುವ 5 ನೈಸರ್ಗಿಕ ಮನೆಮದ್ದುಗಳು.

**ನಿಂಬೆ ಮತ್ತು ಅಡಿಗೆ ಸೋಡಾ ಸ್ಕ್ರಬ್:** ನಿಂಬೆ ಚರ್ಮಕ್ಕೆ ಹೊಳಪು ನೀಡುವ ಘಟಕಾಂಶವಾಗಿದೆ. ಇದು ನೈಸರ್ಗಿಕ ಬ್ಲೀಚಿಂಗ್ ಗುಣಗಳನ್ನು ಹೊಂದಿದ್ದು ಅದು ಡೆಡ್ ಸೆಲ್ ಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ನಿಂಬೆಹಣ್ಣುಗಳು ಆಂಟಿಆಕ್ಸಿಡೆಂಟ್‌ಗಳು ಮತ್ತು ವಿಟಮಿನ್ ಸಿ ಯಿಂದ ತುಂಬಿದ್ದು, ಚರ್ಮದ ಮೈಬಣ್ಣವನ್ನು ಸುಧಾರಿಸುತ್ತದೆ ಮತ್ತು ಚರ್ಮದ ಕೋಶಗಳ ಪುನರುತ್ಪಾದನೆಯನ್ನು ಉತ್ತೇಜಿಸುತ್ತದೆ. ಈ ರಸವನ್ನು ಅಡಿಗೆ ಸೋಡಾದೊಂದಿಗೆ ಬೆರೆಸಿದಾಗ, ಡೆಡ್ ಸೆಲೆಗಳನ್ನು ತೆಗೆದುಹಾಕಲು ಇದು ಅತ್ಯುತ್ತಮ ಸ್ಕ್ರಬ್ಬರ್ ಆಗಿ ಕಾರ್ಯನಿರ್ವಹಿಸುತ್ತದೆ.ಟ್ಯಾನ್ ಆದ ಚರ್ಮದ ಮೇಲೆ ಮಿಶ್ರಣ ವನ್ನು ಅನ್ವಯಿಸಿ ಮತ್ತು ನಿಧಾನವಾಗಿ ಮಸಾಜ್ ಮಾಡಿ ಮತ್ತು 7-10 ನಿಮಿಷಗಳ ಕಾಲ ಬಿಟ್ಟು ನಂತರ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಫಲಿತಾಂಶಗಳನ್ನು ನೋಡಲು ಪ್ರತಿ ವಾರ ಇದನ್ನು ಪುನರಾವರ್ತಿಸಿ.

**ಮೊಸರು ಮತ್ತು ಕಡಲೆ ಹಿಟ್ಟಿನ ಪ್ಯಾಕ್:** ಮೊಸರು ಟ್ಯಾನಿಂಗ್ ವಿರೋಧಿ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದ್ದು, ಮೊಸರಿನಲ್ಲಿರುವ ಸೂಕ್ಷ್ಮಜೀವಿಗಳು ಚರ್ಮದ ಟೋನ್ ಅನ್ನು ಹಗುರಗೊಳಿಸಲು ಸಹಾಯ ಮಾಡುತ್ತದೆ. ಕಡಲೆ ಹಿಟ್ಟು ಕೊಳೆಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ನೀವು ಈ ಎರಡು ಪದಾರ್ಥಗಳನ್ನು ಬೆರೆಸಿದಾಗ, ಅವು ಅತ್ಯದ್ಭುತವಾಗಿ ಕಾರ್ಯನಿರ್ವಹಿಸುತ್ತವೆ. ಒಂದು ಬಟ್ಟಲನ್ನು ತೆಗೆದುಕೊಂಡು ಒಂದು ಚಮಚ ಹುಳಿ ಮೊಸರು ಮತ್ತು ಅರ್ಧ ಟೀ ಚಮಚ ಕಡಲೆ ಹಿಟ್ಟು ಸೇರಿಸಿ, ಉತ್ತಮ ಪೇಸ್ಟ್ ಪಡೆಯುವವರೆಗೆ ಎರಡನ್ನೂ ಮಿಶ್ರಣ ಮಾಡಿ. ನಿಮ್ಮ ಮೊಣಕೈ ಮತ್ತು ಮೊಣಕಾಲುಗಳ ಕಪ್ಪು ಪ್ರದೇಶಗಳಲ್ಲಿ ಇದನ್ನು ಹಚ್ಚಿ. 10 ನಿಮಿಷಗಳ ಕಾಲ ಅಥವಾ ಅದು ಒಣಗುವವರೆಗೆ ಇರಿಸಿ. ಬೆಚ್ಚಗಿನ ನೀರಿನಿಂದ ತೊಳೆಯಿರಿ.




**ಆಲಿವ್ ಎಣ್ಣೆ ಮಸಾಜ್:** ದೊಡ್ಡ ಚಮಚ ಆಲಿವ್ ಎಣ್ಣೆಯನ್ನು ತೆಗೆದುಕೊಂಡು ಡಬಲ್ ಬ್ರಾಯ್ಲರ್ ಪ್ರಕ್ರಿಯೆಯನ್ನು ಬಳಸಿ ಬೆಚ್ಚಗಾಗಿಸಿ. ಈ ಎಣ್ಣೆಯನ್ನು ಮೊಣಕೈ ಮತ್ತು ಮೊಣಕಾಲುಗಳ ಮೇಲೆ 10-15 ನಿಮಿಷಗಳ ಕಾಲ ಅನ್ವಯಿಸಿ. ನೀವು ಮಲಗುವ ಮೊದಲು ಈ ಚಿಕಿತ್ಸೆಯನ್ನು ಮಾಡಲು ಉತ್ತಮ ಸಮಯ. ಈ ಎಣ್ಣೆ ಮಸಾಜ್ ಟ್ಯಾನ್ಡ್ ಮೊಣಕೈ ಮತ್ತು ಮೊಣಕಾಲುಗಳ ಸಮಸ್ಯೆಯನ್ನು ಗುಣಪಡಿಸುವುದಲ್ಲದೆ ಅದನ್ನು ಮೃದುಗೊಳಿಸುತ್ತದೆ. ಆಲಿವ್ ಎಣ್ಣೆಯ ಬದಲಿಗೆ ನೀವು ತೆಂಗಿನ ಎಣ್ಣೆಯನ್ನು ಸಹ ಬಳಸಬಹುದು.

**ಜೇನುತುಪ್ಪ ಮತ್ತು ಸಕ್ಕರೆ ಸ್ಕ್ರಬ್:** ಜೇನುತುಪ್ಪ ಮತ್ತು ಸಕ್ಕರೆ ಎರಡೂ ಪಿಗ್ಮೆಂಟೇಶನ್ ವಿರೋಧಿ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಒಂದು ಚಮಚ ಸಕ್ಕರೆಯನ್ನು ತೆಗೆದುಕೊಂಡು ಅದನ್ನು ಪುಡಿಮಾಡಿ, ಒಂದು ಟೀಚಮಚ ಸಾವಯವ ಜೇನುತುಪ್ಪವನ್ನು ಬೆರೆಸಿ ಪೇಸ್ಟ್ ಮಾಡಿ. ಚರ್ಮದ ಮೇಲೆ ಇದನ್ನು ಹಚ್ಚಿ ಮತ್ತು ನಿಧಾನವಾಗಿ ಮಸಾಜ್ ಮಾಡಿ, 10 ನಿಮಿಷಗಳ ಕಾಲ ಇರಿಸಿ ಮತ್ತು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಉತ್ತಮ ಫಲಿತಾಂಶಗಳಿಗಾಗಿ, ಈ ಸ್ಕ್ರಬ್ ನ್ನು ವಾರಕ್ಕೆ ಮೂರು ಬಾರಿ ಮಾಡಿ.

**ಅಲೋವೆರಾ ಮತ್ತು ಹಾಲಿನ ಪ್ಯಾಕ್:** ಅಲೋವೆರಾದಲ್ಲಿ ನಿಮ್ಮ ಚರ್ಮವನ್ನು ಮೃದುಗೊಳಿಸಲು ಸಹಾಯ ಮಾಡುವ ಪದಾರ್ಥಗಳಿವೆ. ಈ ಜೆಲ್ ನ ಬ್ಯಾಕ್ಟೀರಿಯಾ ವಿರೋಧಿ ಮತ್ತು ಶಿಲೀಂಧ್ರ-ವಿರೋಧಿ ಗುಣಗಳು ಚರ್ಮದ ಟ್ಯಾನಿಂಗ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

## ವಿದ್ಯುತ್ ಮಗ್ಗ ಕಾರ್ಮಿಕರಿಗೆ ಒಂದು ಬಾರಿಯ ಆರ್ಥಿಕ ಪರಿಹಾರ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಗದಗ, ಜ.09: ಕೋವಿಡ್–19 ಸಾಂಕ್ರಾಮಿಕ ರೋಗದ ಸಮಸ್ಯೆಯಿಂದಾಗಿ ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆಯಾಗಿದ್ದರಿಂದ ವಿದ್ಯುತ್‌ಮಗ್ಗ ನೇಕಾರರು ಸಂಕಷ್ಟದಲ್ಲಿರುವುದನ್ನು ಮನಗಂಡು ರಾಜ್ಯ ಸರ್ಕಾರವು 2020–21 ನೇ ಸಾಲಿಗೆ ವಿದ್ಯುತ್‌ಮಗ್ಗ ನೇಕಾರರಿಗೆ ತಲಾ ರೂ.2,000/–ಗಳ ನೆರವನ್ನು ನೀಡಲು ಯೋಜನೆಯನ್ನು ಜಾರಿಗೊಳಿಸಿ ಅರ್ಜಿ ಆಹ್ವಾನಿಸಲಾಗಿತ್ತು. ಆದರೂ ಕೂಡ ಇನ್ನೂ ಹಲವಾರು ವಿದ್ಯುತ್ ಮಗ್ಗ ನೇಕಾರರು ಅರ್ಜಿ ಸಲ್ಲಿಸಿರುವುದಿಲ್ಲ.

ಆದಕಾರಣ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜನೆವರಿ 20 ರವರೆಗೆ ವಿಸ್ತರಿಸಲಾಗಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ವಿದ್ಯುತ್ ಮಗ್ಗ ಘಟಕಗಳಿಗೆ ಸರ್ಕಾರದಿಂದ ಒದಗಿಸುತ್ತಿರುವ ವಿದ್ಯುಚ್ಛಕ್ತಿ ರಿಯಾಯಿತಿಯನ್ನು ಸ್ಥಗಿತಗೊಳಿಸಲು ಮೇಲಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ನರಸಾಪೂರ ಗದಗ–ಬೆಟಗೇರಿ, ದೂರವಾಣಿ ಸಂಖ್ಯೆ: 08372–218649 ಸಂಪರ್ಕಿಸಬಹುದಾಗಿದೆ.

## ಆಕ್ಷೇಪಣೆ ಆಹ್ವಾನ

ಗದಗ, ಜ.09: ಗದಗ–ಬೆಟಗೇರಿ ನಗರಸಭೆಯ ವ್ಯಾಪ್ತಿಯ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಪೌರಾಡಳಿತ ನಿರ್ದೇಶನಲಾಯ, ಬೆಂಗಳೂರ, ಜಾರಿಗೆ ತಂದಿರುವ ಸ್ವಚ್ಛ ಭಾರತ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಗಳನ್ವಯ ನಗರಸಭೆ ವ್ಯಾಪ್ತಿಯ ವಾರ್ಡ ನಂ 01 ರಿಂದ 35 ರವರೆಗೆ ಇರುವ ವಾರ್ಡಗಳನ್ನು ODF+(ಬಯಲು ಶೌಚಮುಕ್ತ) ವಾರ್ಡಗಳೆಂದು ಮತ್ತು ಗದಗ–ಬೆಟಗೇರಿ ನಗರಸಭೆಯನ್ನು ODF+(ಬಯಲು ಶೌಚಮುಕ್ತ) ನಗರವೆಂದು ಘೋಷಿಸುವುದು ಅವಶ್ಯವಿರುತ್ತದೆ.

ಈ ಬಗ್ಗೆ ಸಾರ್ವಜನಿಕರಿಂದ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಅಹ್ವಾನಿಸಲಾಗಿದೆ. ಆದ್ದರಿಂದ ಆಸಕ್ತರು ಈ ಪ್ರಕಟಣೆ ಪ್ರಚುರ ಪಡಿಸಿದ 07 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಆಕ್ಷಪಣೆಗಳನ್ನು/ ಸಲಹೆಗಳನ್ನು/ ಸೂಚನೆಗಳನ್ನು ಮಾನ್ಯ ಪೌರಾಯುಕ್ತರು ನಗರಸಭೆ, ಗದಗ–ಬೆಟಗೇರಿ ಇವರಿಗೆ ಸಲ್ಲಿಸಬಹುದಾಗಿದೆ.

## ನಾಳೆ ವಸತಿ ಸಚಿವ ವಿ ಸೋಮಣ್ಣ ಅವರ ಪ್ರವಾಸ ಕಾರ್ಯಕ್ರಮ

ಗದಗ, ಜ. 09: ವಸತಿ ಸಚಿವ ವಿ ಸೋಮಣ್ಣ ಜನೆವರಿ 11 ರಂದು ಮಧ್ಯಾಹ್ನ 3 ಗಂಟೆಗೆ ಗದುಗಿಗೆ ಆಗಮಿಸಿ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಹುಬ್ಬಳ್ಳಿಗೆ ಪ್ರಯಾಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

## ಜಿಲ್ಲಾ ಪಂಚಾಯತ ಉಪಾಧ್ಯಕ್ಷ ಹುದ್ದೆ ಚುನಾವಣೆ

ಗದಗ, ಜ.09 : ಜಿಲ್ಲಾ ಪಂಚಾಯತ ಉಪಾಧ್ಯಕ್ಷ ಹುದ್ದೆ ರಾಜೀನಾಮೆ ನೀಡಿರುವ ಹಿನ್ನೆಲೆ ತೆರವಾಗಿರುವುದರಿಂದ 5 ವರ್ಷದ ಬಾಕಿ ಉಳಿದಿರುವ ಅವಧಿಗೆ ಜ.18 ರಂದು ಮಧ್ಯಾಹ್ನ 3 ಘಂಟೆಗೆ ಗದಗ ಜಿಲ್ಲಾ ಪಂಚಾಯತ ಕಾರ್ಯಾಲಯದ ಸಭಾಂಗಣದಲ್ಲಿ ಚುನಾವಣಾ ಸಭೆ ಜರುಗಿಸಲಾಗುವುದು.

ಜಿಲ್ಲಾ ಪಂಚಾಯತ ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆ ವರ್ಗಕ್ಕೆ ಮೀಸಲಿಡಲಾಗಿದೆ. ಸದಸ್ಯರು ಚುನಾವಣೆ ಸಭೆಗೆ ಗೊತ್ತುಪಡಿಸಿದ ಅವಧಿಯ 2 ಘಂಟೆ ಮೊದಲೆ ಅಂದರೆ ಜ.18 ರಂದು ಮದ್ಯಾಹ್ನ 1 ಘಂಟೆಗು ಮುಂಚಿತವಾಗಿ ಪ್ರಾದೇಶಿಕ ಆಯುಕ್ತರು ಬೆಳಗಾವಿ ಅಥವಾ ಗದಗ ಅಪರ ಜಿಲ್ಲಾಧಿಕಾರಿಗೆ ನಮೂನೆ–1 ರಲ್ಲಿ ನಾಮ ನಿರ್ದೇಶನ ಪತ್ರವನ್ನು ಸಲ್ಲಿಸಬಹುದು ಎಂದು ಬೆಳಗಾವಿ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾ ಪಂಚಾಯತ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯ ಅಧ್ಯಕ್ಷಾಧಿಕಾರಿಗಳಾದ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್–19 ಹಿನ್ನೆಲೆ ಮಾಸ್ಕ್, ಸ್ಯಾನಿಟೈಜರ್, ಸಾಮಾಜಿಕ ಅಂತರ ಇತ್ಯಾದಿ ಮುಂಜಾಗ್ರತಾ ಕ್ರಮಗಳ ಪಾಲನೆ ಕಡ್ಡಾಯವಾಗಿದೆ ಎಂದು ಅವರು ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

ಗದಗ, ಜ.09 : ಗದಗ ಜಿಲ್ಲೆಯ 5 ತಾಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 17 ಅಂಗನವಾಡಿ ಕಾರ್ಯಕರ್ತೆ, 3 ಮಿನಿ ಅಂಗನವಾಡಿ ಕಾರ್ಯಕರ್ತೆ ಮತ್ತು 103 ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. (ವೆಬ್‌ಸೈಟ್ ವಿಳಾಸ www.anganwadirecruit.kar.nic.in ) ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ ಫೆಬ್ರುವರಿ 8 ಆಗಿದ್ದು ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ ಕಾರ್ಯಾಲಯ, ಜಿಲ್ಲಾಡಳಿತ ಭವನ, ಗದಗ ದೂರವಾಣಿ ಸಂಖ್ಯೆ 08372–220711 ಸಂಪರ್ಕಿಸಬಹುದಾಗಿದೆ.

# ಜಿಲ್ಲೆಯಲ್ಲಿ 110 ಕೋವಿಡ್ ಲಸಿಕಾ ಕೇಂದ್ರಗಳು ಸಕಲ ಸಜ್ಜು: ಜಿಲ್ಲಾಧಿಕಾರಿ

ಹುಬ್ಬಳ್ಳಿ,ಜ.09: ಒಂದು ವಾರದಲ್ಲಿ ಕೋವಿಡ್ ಲಸಿಕೆ ಲಭಿಸುವ ಸಾಧ್ಯತೆ ಇದೆ. ಮೊದಲ ಹಂತದ ಕೋವಿಡ್ ಲಸಿಕಾ ಅಭಿಯಾನದಲ್ಲಿ ಧಾರವಾಡ ಜಿಲ್ಲೆಯಲ್ಲಿ 22 ಸಾವಿರ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲು ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಹೇಳಿದರು. ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ನಡೆದ ಕೋವಿಡ್ ಅಣಕು ಲಿಸಿಕಾ ತಾಲೀಮು ವೀಕ್ಷಿಸಿ ಮಾತನಾಡಿದರು.



110 ಕೋವಿಡ್ ಲಸಿಕಾ ಕೇಂದ್ರಗಳನ್ನು ಆರೋಗ್ಯ ಇಲಾಖೆಯ ಮಾರ್ಗದರ್ಶಿ ಸೂತ್ರಗಳ ಅನುಸಾರ ಸಿದ್ದಪಡಿಸಲಾಗುತ್ತಿದೆ. ಜಿಲ್ಲೆಯ ಎಲ್ಲಾ ಲಸಿಕಾ ಕೇಂದ್ರಗಳನ್ನು ಕಾರ್ಯನಿರತ ಆಸ್ಪತ್ರೆಗಳಲ್ಲೇ ಸ್ಥಾಪಿಸಲಾಗುತ್ತಿದೆ. ಏನಾದರೂ ಅಡ್ಡ ಪರಿಣಾಮಗಳು ಕಂಡು ಬಂದರೆ ಸ್ಥಳದಲ್ಲೇ ತುರ್ತ ಚಿಕಿತ್ಸೆ ನೀಡಲು ಪ್ರತಿ ಆಸ್ಪತ್ರೆಯಲ್ಲಿ ಬೆಡ್‌ಗಳನ್ನು ಕಾಯ್ದಿರಿಸಲಾಗುತ್ತಿದೆ. ಪ್ರತಿ ಲಸಿಕಾ ಕೇಂದ್ರದಲ್ಲೂ ಲಸಿಕೆ ಅಡ್ಡಪರಿಣಾಮದ ಉಪಶಮನದ ಕಿಟ್‌ಗಳು ಇರಲಿವೆ.

ಸೂಕ್ತ ತರಬೇತಿ ಹೊಂದಿದ 5 ಜನರ ತಂಡ, ಪ್ರತಿ ಲಸಿಕಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಲಸಿಕೆ ಪಡೆವ ಆರೋಗ್ಯ ಕಾರ್ಯಕರ್ತರ ಮಾಹಿತಿಯನ್ನು ಈಗಾಗಲೇ ಪಡೆದುಕೊಳ್ಳಲಾಗಿದೆ. ಸ್ಥಳದಲ್ಲಿ ಮಾಹಿತಿ ಪರಿಶೀಲಸಿ ಕೋವಿನ್ ತಂತ್ರಾಂಶದಲ್ಲಿ ನೊಂದಾಯಿಸಿ ಲಸಿಕೆ ನೀಡಲಾಗುವುದು. ಖಾಸಗಿ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಹೆಸರು ಪಟ್ಟಿಯಲ್ಲಿ ಇರದಿದ್ದರೆ.

ಸಂಸ್ಥೆಯ ಮೂಲಕ ಹೆಸರು ನೊಂದಾಯಿಸಿಕೊಳ್ಳಲು ಅವಕಾಶವಿದೆ. ಕಿಮ್ಸ್ ಆಸ್ಪತ್ರೆಯಲ್ಲಿ 10 ಲಸಿಕಾ ಕೇಂದ್ರಗಳನ್ನು ತೆರೆಯಲಾಗುವುದು. ಕಿಮ್ಸ್ ಎಲ್ಲಾ ಸಿಬ್ಬಂದಿಗಳಿಗೆ ಇಲ್ಲಿಯೇ ಲಸಿಕೆ ನೀಡಲಾಗವುದು. ಜಿಲ್ಲೆಯಲ್ಲಿ ಎರೆಡು ದಿನಗಳ ಕಾಲ ಲಸಿಕಾ ಅಭಿಯಾನ ಜರುಗುವುದು. ಪ್ರತಿ ಕೇಂದ್ರದಲ್ಲಿ ದಿನಂಪ್ರತಿ 100 ಜನರಿಗೆ ಲಸಿಕೆ ನೀಡಲಾಗುವುದು. ಲಸಿಕೆ ಅಭಿಯಾನ ಎರಡು ದಿನದಲ್ಲಿ ಪೂರ್ಣವಾಗದಿದ್ದರೆ. ಮೂರನೆ ದಿನವೂ ಲಸಿಕೆ ಅಭಿಯಾನ ಮುಂದುವರಿಸಲಾಗುವುದು.

ನಿರ್ದೇಶನದಂತೆ ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಹಾಗೂ ದ್ವಿತೀಯ ಹಂತದಲ್ಲಿ ಕೊರೋನಾ ವಾರಿಯರ್ಸ್, 50 ವರ್ಷ ಮೇಲ್ಪಟ್ಟರು ಹಾಗೂ ಕೋವಿಡ್ ತುತ್ತಾಗುವ ಸಂಭವವಿರುವ ರೋಗಿಗಳಿಗೆ ನೀಡಲಾಗುವುದು. ಪೊಲೀಸ್, ಸೇನೆ ಸೇರಿದಂತೆ ಇತರೆ ರಕ್ಷಣಾ ಪಡೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಜಿಲ್ಲೆಯಲ್ಲಿ 40 ರಿಂದ 50 ಸಾವಿರ ಜನರ ನೊಂದಣಿಯಾಗುವ ನಿರೀಕ್ಷೆಯಿದೆ. ನೊಂದಣಿಯಾಗಿರುವವರು ಸ್ವ–ಇಚ್ಛೆಯಿಂದ ಲಸಿಕೆ ಪಡದುಕೊಳ್ಳಬೇಕು. ಯಾವುದೇ ಒತ್ತಾಯ ಇಲ್ಲ. ಕೋವಿನ್ ತಂತ್ರಾಂಶ ನಿರ್ವಹಣೆಯಲ್ಲಿ ಯಾವುದೇ ತೊಂದರೆ ಇದುವರೆಗೂ ಕಂಡುಬಂದಿಲ್ಲ. ನೊಂದಣಿ ವೇಳೆ ತೊಂದರೆ ಕಂಡುಬಂದರೆ ನಿರ್ವಹಣೆ ವಿಭಾಗಕ್ಕೆ ವರದಿ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಕಿಮ್ಸ್ ನಿರ್ದೇಶಕ ಡಾ.ರಾಮಲಿಂಗಪ್ಪ ಅಂಟರತಾನಿ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಯಶವಂತ ಮದೀನಕರ, ಕಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಅರುಣಕುಮಾರ್, ಡಾ.ಲಕ್ಷ್ಮೀಕಾಂತ್ ಸೇರಿದಂತೆ ಇತರೆ ಆರೋಗ್ಯ ಸಿಬಂದಿ ಉಪಸ್ಥಿತರಿದ್ದರು.

## ಬಿಜೆಪಿ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸಭೆ

ಗದಗ,ಜ.09: ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಲಯದಲ್ಲಿ ಯುವ ಮೋರ್ಚಾ ವತಿಯಿಂದ ಜಿಲ್ಲಾ ಕಾರ್ಯಕಾರಿಣಿ ಸಭೆ ಜರುಗಿತು.



ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶಿವರಾಜಗೌಡ ಹಿರೇಮನಿಪಾಟೀಲ ರವರು ಮಾತನಾಡಿದ ಅವರು ಜಿಲ್ಲೆಯಲ್ಲಿರುವ 9 ಮಂಡಲಗಳಲ್ಲಿ ಬಿಜೆಪಿ ಯುವ ಮೋರ್ಚಾದ ಸಂಘಟನೆ ಹಾಗೂ ಕಾರ್ಯವೈಕರಿ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಡಾ॥ ಮಲ್ಲಿಕಾರ್ಜುನ ಬಾಳಿಕಾಯಿ ಮಾತನಾಡಿ ಪಕ್ಷದ ಪದಾಧಿಕಾರಿಗಳಿಗೆ ಪಕ್ಷ ನಡೆದುಬಂದ ಹಾದಿ ಹಾಗು ಸಂಘಟನಾತ್ಮಕ ವಿಷಯಗಳನ್ನು ಎಳೆ, ಎಳೆಯಾಗಿ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಭಾಗವಹಿಸಿದ್ದ ಬಿಜೆಪಿ ಗದಗ ಜಿಲ್ಲಾಧ್ಯಕ್ಷರಾದ ಮೋಹನ ಮಾಳಶೆಟ್ಟಿರವರು, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಪ್ರಕಾಶ ಶ್ರೀಂಗೇರಿ, ಕಾರ್ಯದರ್ಶಿಗಳಾದ ಈರಣ್ಣ ಅಂಗಡಿ, ಕಾಂತೀಲಾಲ ಬನ್ಸಾಲಿ, ಎಂ.ಎಸ್. ಕರೀಗೌಡ್ರ, ಮಾಧವ ಗಣಾಚಾರಿ, ಸಿದ್ದೇಶ ಹೂಗಾರ, ರಾಹುಲ ಅರಳಿ, ಕಿರಣ ಕಲಾಲ, ಅನೀಲ ದರಿಯಣ್ಣವರ, ಸಿದ್ರಾಮೇಶ ಹಿರೇಮಠ, ಲಕ್ಷ್ಮಣ ಲಮಾಣಿ, ಪಂಚಾಕ್ಷರಿ ಅಂಗಡಿ, ಮಾಂತೇಶ ಕೊರಡಕೇರಿ, ನವೀನ ಕೊಟೆಕಲ್, ರಾಹುಲ ಸಂಕಣ್ಣವರ, ರವಿ ದೇಶಣ್ಣವರ, ವಿಠಲ ಹವಾಲ್ದಾರ, ನವೀನ ಹಿರೇಮಠ, ರವಿಚಂದ್ರ ಅಬ್ಬಿಗೇರಿ, ಕಳಕನಗೌಡ ಜಕ್ಕನಗೌಡ್ರ, ಈರಪ್ಪ ಪಾರಪ್ಪನವರ, ಮುತ್ತು ಬೆನಹಾಳ ಯುವ ಮೋರ್ಚಾದ ಜಿಲ್ಲಾ ಪದಾಧಿಕಾರಿಗಳು, ಮಂಡಲ ಅಧ್ಯಕ್ಷರುಗಳು, ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಗ್ರಾಮ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿ ಗೆದ್ದ ಯುವ ಮೋರ್ಚಾ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು.

## ಜ. 15 ರಿಂದ ಶ್ರೀರಾಮ ಭವ್ಯ ಮಂದಿರ ನಿರ್ಮಾಣಕ್ಕಾಗಿ ನಿಧಿ ಸಮರ್ಪಣಾ ಮಹಾ ಅಭಿಯಾನಕ್ಕೆ ಚಾಲನೆ

ಗದಗ,ಜ.09: ಐತಿಹಾಸಿಕ ತಾಣವಾದ ಅಯೋಧ್ಯೆಯಲ್ಲಿ ರಘುವಂಶ ಕುಲೋದ್ದಾರಕ ಶ್ರೀರಾಮ ಜನ್ಮಭೂಮಿ ಭವ್ಯ ಮಂದಿರ ನಿರ್ಮಾಣಕ್ಕಾಗಿ ಜನೇವರಿ 15 ರಿಂದ ನಡೆಯಲಿರುವ ನಿಧಿ ಸಮರ್ಪಣಾ ಮಹಾ ಅಭಿಯಾನಕ್ಕೆ ದೇಶ, ರಾಜ್ಯ ಮತ್ತು ಗದಗ ಜಿಲ್ಲೆಯ ಸಮಸ್ತ ಜನತೆ ತನು ಮನ ಧನದಿಂದ ಸಹಕರಿಸುವಂತೆ ಗದಗ ಬಿಜೆಪಿ ಯುವ ನಾಯಕ ಅನೀಲ ಮೆಣಸಿನಕಾಯಿ ಮನವಿ ಮಾಡಿದ್ದಾರೆ.



ಪತ್ರಿಕೆಗೆ ಹೇಳಿಕೆ ನೀಡಿದ ಅವರು, ಕಳೆದ 500 ವರ್ಷಗಳಿಂದ ನೆನೆಗುದಿಗೆ ಬಿದ್ದ ಅಯೋಧ್ಯೆ ವಿವಾದ ಇದೀಗ ಇತ್ಯರ್ಥ ಕಂಡು ಭವ್ಯ ಮಂದಿರದೊಂದಿಗೆ ತಲೆ ಎತ್ತಿ ಇಡಿ ವಿಶ್ವದಲ್ಲಿಯೇ ಖ್ಯಾತಿಯಾಗಲಿರುವ ಶ್ರೀರಾಮ ಜನ್ಮ ಭೂಮಿಯಲ್ಲಿ ಶ್ರೀರಾಮನ ಮಂದಿರವನ್ನು ಶ್ರೀರಾಮ ಸದ್ಭಕ್ತರ ದೇಣಿಗೆಯಿಂದಲೇ ನಿರ್ಮಿಸುವ ಉದ್ದೇಶದಿಂದಾಗಿಯೇ ಜನೇವರಿ 15 ರಿಂದ ನಿಧಿ ಸಮರ್ಪಣಾ ಮಹಾ ಅಭಿಯಾನವನ್ನು ದೇಶಾದ್ಯಂತ ಪ್ರತಿ ಮನೆ ಮನೆಗೆ ಬೇಟಿ ನೀಡಿ ಸಂಗ್ರಹಿಸಲಾಗುವದು.

ವಿಶ್ವದಲ್ಲಿಯೇ ಐತಿಹಾಸಿಕ ಮಂದಿರ ನಿರ್ಮಾಣದ ಖ್ಯಾತಿ ಗಳಿಸಲಿರುವ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯಕ್ಕೆ ದೇಶದ ಪ್ರತಿಯೊಬ್ಬ ನಾಗರಿಕನು ತನು ಮನ ಧನದಿಂದ ಸಹಕರಿಸುವದು ಮತ್ತು ಪ್ರೋತ್ಸಾಹಿಸುವದು ನಮ್ಮ ಆದ್ಯ ಕರ್ತವ್ಯವಾಗಿದೆ, ವಿಶ್ವದ ಪ್ರಭಾವಿ ಪ್ರಧಾನಿ ಹೆಗ್ಗಳಿಕೆಯ ನರೇಂದ್ರ ಮೋದಿ ಅವರ ಆಡಳಿತ ಅವಧಿಯಲ್ಲಿ ಶ್ರೀರಾಮ ಭವ್ಯ ಮಂದಿರ ನಿರ್ಮಾಣ ಕಾಮಗಾರಿ ಐತಿಹಾಸಿಕ ಮೈಲುಗಲ್ಲಾಗಲಿದೆ, ಮಹಾನ ಪುರುಷ ಶ್ರೀರಾಮ ಭವ್ಯ ಮಂದಿರ ನಿರ್ಮಾಣ ಕಾಮಗಾರಿಯಲ್ಲಿ ದೇಶದ ಪ್ರತಿಯೊಬ್ಬ ನಾಗರಿಕನಿಗೆ ಭಾಗವಹಿಸುವ ಅವಕಾಶ ನೀಡಿದ್ದು ನಮ್ಮ ಪೂರ್ವ ಜನ್ಮ ಪುಣ್ಯನೆನ್ನಬಹುದು. ಈ ಪುಣ್ಯ ಧಾರ್ಮಿಕ ಕಾರ್ಯಕ್ಕೆ ಶ್ರೀರಾಮ ರಾಮಭಕ್ತರು ಅಷ್ಟು ಇಷ್ಟು ಅಲ್ಲಾ, ತಮ್ಮ ಸದ್ಭಕ್ತಿಯ ದೇಣೀಗೆ ನೀಡಬಹುದು, ದೇಶ, ರಾಜ್ಯ ಮತ್ತು ಗದಗ ಜಿಲ್ಲೆಯ ಸಮಸ್ತ ಜನತೆ ತಮ್ಮ ಶಕ್ತಿಗನುಸಾರವಾಗಿ ದೇಣಿಗೆ ನೀಡಿ ರಾಮಲಲ್ಲಾನ ಕ್ರಪೆಗೆ ಪಾತ್ರರಾಗಿ ಬದುಕು ಸಾರ್ಥಕ ಪಡಿಸಿಕೊಳ್ಳಲು ಬಿಜೆಪಿ ಯುವ ನಾಯಕ ಅನೀಲ ಮೆಣಸಿನಕಾಯಿ ಮನವಿ ಮಾಡಿದ್ದಾರೆ.

## ಬಿಜೆಪಿಯಿಂದ ಜನಸೇವಕ ಸಮಾವೇಶ ಜ.11ರಿಂದ

ಹುಬ್ಬಳ್ಳಿ,ಜ.09: ಗ್ರಾಪಂ ಚುನಾವಣೆಯಲ್ಲಿ ಗೆದ್ದ ಬಿಜೆಪಿ ಬೆಂಬಲಿತ ಸದಸ್ಯರನ್ನು ಸನ್ಮಾನಿಸುವುದಕ್ಕಾಗಿ 31 ಜಿಲ್ಲೆಗಳಲ್ಲಿ ಜನಸೇವಕ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯ ದರ್ಶಿ ಮಹೇಶ್ ತೆಂಗಿನಕಾಯಿ ಹೇಳಿದರು. ನಗರದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಜನಸೇವಕ ಸಮಾವೇಶಕ್ಕಾಗಿ 5 ತಂಡಗಳನ್ನು ರಚಿಸಲಾಗಿದೆ. ಮೊದಲ ತಂಡದ ನೇತೃತ್ವವನ್ನು, ಬಿಜೆಪಿ ರಾಜ್ಯಾಧ್ಯಕ್ಷ ನಳಿನಕುಮಾರ ಕಟೀಲು, 2 ನೇ ತಂಡದ ನೇತೃತ್ವವನ್ನು ಸಚಿವ ಈಶ್ವರಪ್ಪ, 3, 4 ಮತ್ತು 5 ನೇ ತಂಡದ ನೇತೃತ್ವವನ್ನು ಕ್ರಮವಾಗಿ ಉಪ ಮುಖ್ಯಮಂತ್ರಿಗೋವಿಂದ ಕಾರಜೋಳ, ಜಗದೀಶ್ ಶೆಟ್ಟರ್, ಡಾ. ಅಶ್ವತ್ಥನಾರಾಯಣ ವಹಿಸುವರು ಎಂದರು.



ಜ. 11 ರಿಂದ 13ರವರೆಗೆ ಸಮಾವೇಶ ನಡೆಯಲಿದೆ. ಜ. 11 ರಂದು ಮುಖ್ಯಮಂತ್ರಿ ಯಡಿಯೂರಪ್ಪ ಮೈಸೂರಿನಲ್ಲಿ ಸಮಾವೇಶಕ್ಕೆ ಚಾಲನೆ ನೀಡುವರು. ನಿತ್ಯ 2 ಜಿಲ್ಲೆಗಳಲ್ಲಿ 2 ಸಮಾವೇಶ ನಡೆಯಲಿವೆ. ಮುಂದಿನ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಸಿದ್ಧತೆಗೂ ಈ ಸಮಾವೇಶದ ಮೂಲಕ ಚಾಲನೆ ನೀಡಲಾಗುವುದು.ಜ. 17 ರಂದು ಮಧ್ಯಾಹ್ನ 3 ಗಂಟೆಗೆ ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಸಮಾವೇಶದ ಸಮಾರೋಪದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಪಾಲ್ಗೊಳ್ಳುವರು. ಬೆಳಗಾವಿ ಲೋಕಸಭೆ ಉಪ ಚುನಾವಣೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಧಾರವಾಡ ಜಿಲ್ಲೆಯ ಜನಸೇವಕ ಸಮಾವೇಶ ಜ. 10 ರಂದು ಬೆಳಗ್ಗೆ ಹುಬ್ಬಳ್ಳಿಯ ಗೋಕುಲ ಗಾರ್ಡನ್ ನಲ್ಲಿ ನಡೆಯಲಿದೆ.ಬಿಜೆಪಿ ಬೆಂಬಲಿತ ಗ್ರಾಪಂನ ನೂತನ 1,216 ಸದಸ್ಯರು ಪಾಲ್ಗೊಳ್ಳವರು ಎಂದರು. ರಾಜ್ಯ ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷ ನೆ.ಲ.ನರೇಂದ್ರಬಾಬು, ಧಾರವಾಡ ಜಿಲ್ಲಾ ಬಿಜೆಪಿ ಉಸ್ತುವಾರಿ ಲಿಂಗರಾಜ ಪಾಟೀಲ್, ಜಿಲ್ಲಾ ಗ್ರಾಮಿಣ ಬಿಜೆಪಿ ಅಧ್ಯಕ್ಷ ಬಸವರಾಜ ಕುಂದಗೋಳಮಠ ಸೇರಿದಂತೆ ಪಕ್ಷದ ಇತರ ಗಣ್ಯರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಸಹಕಾರಿ ಸಂಸ್ಥೆಯ ಸಿಬ್ಬಂದಿಗಳಿಗೆ ತರಬೇತಿಗೆ

ಬಾಗಲಕೋಟೆ, ಜ.09: ಬೆಳಗಾವಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ವತಿಯಿಂದ ಸಹಕಾರ ಸಂಘಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 6 ತಿಂಗಳುಗಳ ದೂರ ಶಿಕ್ಷಣ ಮೂಲಕ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಹಕಾರ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ಸಹಕಾರ, ಸಹಕಾರ ಪತ್ತು ಮತ್ತು ಬ್ಯಾಂಕಿಂಗ್, ಸಹಕಾರ ಸಂಘಗಳ ನಿರ್ವಹಣೆ, ಲೆಕ್ಕಶಾಸ್ತ್ರ, ಲೆಕ್ಕ ಪರಿಶೋಧನೆ, ಸಹಕಾರ ಕಾಯ್ದೆ ಅಂಶಗಳು ಹಾಗೂ ಕಂಪೂಟರ್ ಆಪರೇಷನ್ ವಿಶಯಗಳ ಭೋದನೆ ಮಾಡಲಾಗುವುದು. ಜನೆವರಿಯಿಂದ ಪ್ರವೇಶಗಳು ಪ್ರಾಂಭವಾಗಲಿದ್ದು, ಅರ್ಹ ಸಿಬ್ಬಂದಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ: 0831–2950026, 7259729104, 8884259545, 630475029, 8050533207 ಕ್ಕೆ ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಜ.11 ರಂದು ಉಚಿತ ಕೃತಕ ಕಾಲು ಜೋಡಣಾ ಶಿಬಿರ

ಬಳ್ಳಾರಿ,ಜ.09: ವಿಕಲಚೇತನರ ಪುನರ್ವಸತಿ ಕೇಂದ್ರ ಹಾಗೂ ಆಂಧ್ರಪ್ರದೇಶದ ಮಂಗಳಪಾಲೆಂನ ಶ್ರೀ ಗುರುದೇವ ಚಾರಿಟಬಲ್ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕೃತಕ ಕಾಲು ಜೋಡಣಾ ಶಿಬಿರವು ಇದೇ ಜ.11 ರಂದು ಬೆಳಗ್ಗೆ 9ಕ್ಕೆ ನಗರದ ವಿಮ್ಸ್ ಆವರಣದಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದಲ್ಲಿ ನಡೆಯಲಿದೆ ಎಂದು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದಲ್ಲಿ ಈಗಾಗಲೇ ಗುರುತಿಸಿರುವ ವಿಕಲಚೇತನರಿಗೆ ವಿವಿಧ ಸಾಧನ ಸಲಕರಣೆಗಳನ್ನು ನೀಡಲಾಗುತ್ತದೆ. ಕೃತಕ ಕಾಲು ಬೇಕಾದ ವಿಕಲಚೇತನರು ಶಿಬಿರಕ್ಕೆ ಹಾಜರಾಗಿ ಇದರ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ. 6364652857/9731961326/9449478046 ಸಂಪರ್ಕಿಸಬಹುದಾಗಿದೆ.

## ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಪ್ರವಾಸ

ಹುಬ್ಬಳ್ಳಿ,ಜ.09: ಉಪಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವರಾದ ಗೋವಿಂದ ಕಾರಜೋಳ ಅವರು ಭಾನುವಾರ ಜನವರಿ 10 ರಂದು ಧಾರವಾಡ ಪ್ರವಾಸ ಕೈಗೊಂಡಿದ್ದಾರೆ.ಅಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆಯುವ ಕರ್ನಾಟಕ ರಾಜ್ಯ ಮಾದರ ಪದವೀಧರ ಸಂಘ ಉದ್ಘಾಟನೆ ಹಾಗೂ ನೂತನ ವಿಧಾನಪರಿಷತ್ ಸದಸ್ಯರು, ನಿಗಮ ,ಮಂಡಳಿಗಳ ಅಧ್ಯಕ್ಷರು ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೆಳಿಗ್ಗೆ 11 ಗಂಟೆಗೆ ಹುಬ್ಬಳ್ಳಿ ಗೋಕುಲ ಗಾರ್ಡನ್ ನಲ್ಲಿ ಬಿಜೆಪಿ ಆಯೋಜಿಸಿರುವ ಜನಸೇವಕ ಸಮಾವೇಶದಲ್ಲಿ ಪಾಲ್ಗೊಳ್ಳುವರು.

## ಯುವಕರು ರಾಜಾಕಾರಣದಲ್ಲಿ ಆಸಕ್ತಿವುಳ್ಳವರಾಗಬೇಕು: ಹ್ಯಾರೀಸ್ ನಲ್‌ಪಾಡ್



ಹೊಸಪೇಟೆ,ಜ.09: ಯುವಕರು ಸ್ವಾಭಿಮಾನವುಳ್ಳವರಾಗಿರುತ್ತಾರೆ ಆದ್ದರಿಂದ ದೇಶದಲ್ಲಿ ಯುವಕರು ಹೆಚ್ಚಾಗಿ ರಾಜಕೀಯದಲ್ಲಿ ಆಸಕ್ತಿ ವಹಿಸುವುದರ ಮೂಲಕ ದೇಶವನ್ನು ಪ್ರಗತಿಯೆತ್ತ ಸಾಗಿಸಲು ಅನುಕೂಲ ವಾಗುತ್ತದೆ ಎಂಬ ಕನಸಿನೊಂದಿಗೆ ರಾಹುಲ್ ಗಾಂಧಿ ಯುವ ಕಾಂಗ್ರೇಸ್‌ನ್ನು ಸ್ಥಾಪಿಸಿದ್ದಾರೆ,ಇದರಿಂಧ ಎಲ್ಲಾ ಯುವಕರಿಗೂ ರಾಜಕಾರಣದಲ್ಲಿ ಮುಕ್ತ ಅವಕಾಶ ದೊರಕುತ್ತದೆ ಎಂದು ಕಾಂಗ್ರೇಸ್ ಮುಖಂಡ ಹ್ಯಾರೀಸ್ ನಲ್‌ಪಾಡ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸದರು.

ರಾಜ್ಯ ಯುವ ಕಾಂಗ್ರೇಸ್ ಚುನಾವಣೆ ಪ್ರಚಾರದ ನಿಮಿತ್ತ ನಗರಕ್ಕೆ ಆಗಮಿಸಿದ ಅವರು ನಗರದ ಹೊಸಪೇಟೆ ಪಿ.ಬಿ.ಎಸ್.ಗ್ರಾಂಡ್ ಹೊಟೆಲ್ ನಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.ಯುವಕರು ಪಕ್ಷ ಸಂಘಟನೆ ಮಾಡಿ ಮುಖ್ಯವಾಹಿನಿಗೆ ಬರಬೇಕೆಂದರು.

ಗುರುವಾರ ತಡರಾತ್ರಿ ನಡೆದ ಸಭೆಯಲ್ಲಿ ಜಿಲ್ಲಾ ಯುವಕಾಂಗ್ರೇಸ್ ಮಾಜಿ ಅದ್ಯಕ್ಷ ಹಭೀಬ್,ಯುವ ಕಾಂಗ್ರೇಸ್ ತಾಲೂಕು ಮಾಜಿ ಅದ್ಯಕ್ಷ ಲಿಯಾಕತ್ ಅಲಿ,ಡಿ. ನಾಗರಾಜ್ , ಭಾಣದಗಣೇಶ್, ಡಿ.ವೆಂಕಟರಮಣ,ಹಬೀಬ್ ರೆಹಮಾನ್,ವಿ.ಸೋಮಪ್ಪ, ನಿಜಾಮುದ್ದೀನ್ , ರಾಯುಡು,ಭರತ್ ಕುಮಾರ್,ಮುಂತಾದ ನಾಯಕರು ಅವರನ್ನು ನಗರಕ್ಕೆ ಬರಮಾಡಿಕೊಂಡು ಸ್ವಾಗತಿಸಿ ಸನ್ಮಾನಿಸಿದರು.

# ಪ್ರಮುಖ ಬಸ್ ನಿಲ್ದಾಣಗಳಲ್ಲಿ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್‌ಗಳ ವಿತರಣೆ ಆರಂಭ

ಹುಬ್ಬಳ್ಳಿ,ಜ.09 : 2020–21ನೇ ಶೈಕ್ಷಣಿಕ ವರ್ಷದ ಅವಧಿಗೆ ಶಾಲಾ ಕಾಲೇಜುಗಳು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ವಾಯುವ್ಯ ಸಾರಿಗೆ ಸಂಸ್ಥೆ ಹುಬ್ಬಳ್ಳಿ ಗ್ರಾಮಾಂತರ ವಿಭಾಗದ ವ್ಯಾಪ್ತಿಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್‌ಗಳ ವಿತರಣೆ ಆರಂಭಗೊಂಡಿದೆ.



ನವಲಗುಂದ, ಕಲಘಟಗಿ, ಕುಂದಗೋಳ, ಅಣ್ಣಿಗೇರಿ ಮತ್ತು ತಡಸ ಬಸ್ ನಿಲ್ದಾಣಗಳಲ್ಲಿ ವಿದ್ಯಾರ್ಥಿ ಪಾಸು ವಿತರಣಾ ಕೇಂದ್ರಗಳನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳು ಪಾಸುಗಳನ್ನು ಪಡೆಯಲು ತಮ್ಮ ಹತ್ತಿರದ "ಹುಬ್ಬಳ್ಳಿ–ಧಾರವಾಡ ಒನ್" ಕೇಂದ್ರದಲ್ಲಿ ಅಥವ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಸೇವಾ ಕೇಂದ್ರದಲ್ಲಿ (ಸಿ.ಎಸ್.ಸಿ ಸೆಂಟರ್) ಅಗತ್ಯ ದಾಖಲಾತಿಗಳೊಂದಿಗೆ ಸೇವಾ ಸಿಂಧು ಪೋ?ರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು.

ನಂತರ ಸದರಿ ದಾಖಲಾತಿಗಳ ಪ್ರತಿಗಳೊಂದಿಗೆ ನಿಗಧಿತ ಮೊತ್ತವನ್ನು ತಮ್ಮ ಶಾಲೆ– ಕಾಲೇಜಿನಲ್ಲಿ ಸಲ್ಲಿಸಬೇಕು. ಶಿಕ್ಷಣ ಸಂಸ್ಥೆಗಳ ಅಧಿಕಾರಿಗಳು ಅಗತ್ಯ ದಾಖಲಾತಿಗಳು ಹಾಗೂ ಮೊತ್ತದೊಂದಿಗೆ ಎಲ್ಲ ವಿದ್ಯಾರ್ಥಿಗಳ ಅರ್ಜಿಗಳನ್ನುತಮ್ಮ ವ್ಯಾಪ್ತಿಯ ಸಂಸ್ಥೆಯ ಪಾಸು ವಿತರಣಾ ಕೇಂದ್ರದಲ್ಲಿ ನೀಡಿ, ಪಾಸುಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ವಿತರಿಸುವರು ಎಂದು ವಾಕರಸಾ ಸಂಸ್ಥೆ, ಹುಬ್ಬಳ್ಳಿ ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ತಿಳಿಸಿದ್ದಾರೆ.

ಅಗತ್ಯವಿರುವ ದಾಖಲಾತಿಗಳು: 2020–21 ನೇ ಸಾಲಿನಲ್ಲಿ ಶಾಲಾ ಕಾಲೇಜಿಗೆ ಪ್ರವೇಶ ಪಡೆದಿರುವ ಬಗ್ಗೆ ಶುಲ್ಕ ಪಾವತಿ ರಸೀದಿ, ವಾಸ ಸ್ಥಳ ವಿಳಾಸ ದೃಢೀಕರಣ, ಆಧಾರ್ ಕಾರ್ಡ್ ಹಾಗೂ ಇತ್ತೀಚಿನ ಸ್ಟಾಂಪ್ ಅಳತೆಯ ಮೂರು ಭಾವಚಿತ್ರಗಳು.

ನಿಗದಿತ ಪಾಸ್ ಶುಲ್ಕದೊಂದಿಗೆಸಂಸ್ಕರಣ ಶುಲ್ಕ ರೂ.100 ಹಾಗೂ ಅಪಘಾತ ಪರಿಹಾರ ನಿಧಿ ರೂ.50 ವಿವಿಧ ತರಗತಿಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ನಿಗದಿಪಡಿಸಿದ ಪಾಸ್ ದರಗಳ ವಿವರಗಳು: ಶಾಲೆ ಪಾಸ್ ಒಟ್ಟು ಕಾಲೇಜು ದರ ಮೊತ್ತ ಇಂತಿದೆ; ಪ್ರಾಥಮಿಕ : ಉಚಿತ/ ರೂ.150 ಪ್ರೌಢಶಾಲೆ ವಿದ್ಯಾರ್ಥಿಗಳು 600/750 ಪ್ರೌಢಶಾಲೆ ವಿದ್ಯಾರ್ಥಿನಿಯರು 400/550 ಕಾಲೇಜು/ ಡಿಪ್ಲೊ?ಲೀಮಾ 900/1050 ಐಟಿಐ 1150/1300 ವೃತ್ತಿಪರ ಕೋರ್ಸುಗಳು 1400/1550 ಸಂಜೆ ಕಾಲೇಜು/ ಪಿಎಚ್ ಡಿ 1200/1350


# ವಿಜಯಪುರ ನಗರ ಸೌಂದರೀಕರಣ – ಮೂಲಸೌಕರ್ಯ ವೃದ್ಧಿಗೆ ವಿಶೇಷ ಗಮನ ನೀಡಿ: ಡಿ.ರಂದೀಪ್

ವಿಜಯಪುರ ಜ.9: ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ವಿಜಯಪುರ ನಗರದ ಮುಖ್ಯ ರಸ್ತೆಗಳ ಸುಧಾರಣೆ ಹಾಗೂ ನಗರ ಸೌಂದರೀಕರಣಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸಲು ವಿಶೇಷ ಗಮನ ನೀಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಿ.ರಂದೀಪ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ವಿವಿಧ ಅಭಿವೃದ್ಧಿ, ಪ್ರವಾಹ ಮತ್ತು ಮಳೆ ಹಾನಿ ಕುರಿತು ಪರಿಶೀಲನಾ ಹಾಗೂ ಕೋವಿಡ್–19 ಕ್ರಮಗಳ ಬಗ್ಗೆ ಸಭೆ ನಡೆಸಿದ ಅವರು ದೆಹಲಿ ನಂತರ ಅತೀ ಹೆಚ್ಚು ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ವಿಜಯಪುರ ಸರ್ವಾಂಗೀಣ ಅಭಿವೃದ್ಧಿಗೆ ಗಮನ ನೀಡಬೇಕು. ವಿಶೇಷವಾಗಿ ಮುಖ್ಯ ರಸ್ತೆಗಳ ನಿರ್ಮಾಣ, ಘನ ತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ಸುಧಾರಣೆ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುವ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು.

ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ಈ ನಗರ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಗೊಳ್ಳಬೇಕಾಗಿದೆ. ಕ್ರಿಯಾಯೋಜನೆಯನ್ವಯ ರಸ್ತೆಗಳ ವಿಶೇಷವಾಗಿ ಅಥಣಿ, ಸೋಲಾಪೂರ, ಬಾಗಲಕೋಟ ಮತ್ತು ಸಿಂದಗಿ ಕಡೆಗೆ ಹೋಗುವಂತಹ ರಸ್ತೆಗಳು ಆಂತರಿಕ ರಸ್ತೆಗಳಿಗೆ ಸಂಪರ್ಕ ಹೊಂದಿದ್ದು, ಇಂತಹ ರಸ್ತೆಗಳ ಸುಧಾರಣೆಗೆ ಗಮನ ನೀಡಬೇಕು. ಅವಶ್ಯಕ ಅನುದಾನದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಲಾಗುವುದು. ಅದರಲ್ಲಿಯೂ ಬೃಹತ್ ಪ್ರಮಾಣದ ಮೂಲ ಸೌಕರ್ಯ ಕಲ್ಪಿಸುವಂತಹ ಕಾರ್ಯಗಳ ಅಡಿಯಲ್ಲಿ ಪ್ಯಾಕೇಜ್ ರೂಪದಲ್ಲಿ ಅನುದಾನ ತರಲು ಪ್ರಯತ್ನಿಸಲಾಗುವುದು. ಸರ್ಕಾರಕ್ಕೆ ಪಾಲಿಕೆಯಿಂದ ಸಲ್ಲಿಸಲಾದ ಪ್ರಸ್ತಾವನೆಗಳ ಬಗ್ಗೆಯೂ ಗಮನಕ್ಕೆ ತರಲು ಅವರು ಸೂಚನೆ ನೀಡಿದರು.

ಅದರಂತೆ ಐತಿಹಾಸಿಕ ಸ್ಮಾರಕಗಳ ವ್ಯಾಪ್ತಿಯಲ್ಲಿ ಅವಶ್ಯಕ ಮೂಲಸೌಲಭ್ಯಗಳನ್ನು ಕಲ್ಪಿಸುವ ಕುರಿತು ಪ್ರವಾಸೋದ್ಯಮ ಅಧಿಕಾರಿಗಳು ಕೂಡ ವಿಶೇಷ ರೀತಿಯಲ್ಲಿ ಚಿಂತನೆ ನಡೆಸಿ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸಹ ಸಲ್ಲಿಸಬೇಕು. ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆಯ ಮೂಲಕ ಅನುದಾನಕ್ಕೆ ತಾಂತ್ರಿಕ ಅನುಮೋದನೆ ಪಡೆಯಬೇಕೆಂದು ತಿಳಿಸಿದ ಅವರು ನಗರದ ಸ್ವಚ್ಛತೆ, ವೈಯಕ್ತಿಕ ಶೌಚಾಲಯಗಳ ಅತ್ಯುತ್ತಮ ನಿರ್ವಹಣೆ, ಘನ ತ್ಯಾಜ್ಯಗಳ ನಿರ್ವಹಣೆ ಇತರೆ ಅಭಿವೃದ್ಧಿ ಕಾರ್ಯಗಳ ಸಮರ್ಪಕ



ನಿರ್ವಹಣೆಯ ಮೂಲಕ ಸುಂದರ ನಗರ ರೂಪಿಸಲು ಸಾಧ್ಯವಿದ್ದು, ಮಹಾನಗರ ಪಾಲಿಕೆ, ಪ್ರವಾಸೋದ್ಯಮ ಸೇರಿದಂತೆ ಇತರ ಅವಶ್ಯಕ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

ನಗರ ಸೌಂದರೀಕರಣದಿಂದ ಹೂಡಿಕೆದಾರರನ್ನು ಆಕರ್ಷಿಸಲು ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡುವ ಅಗತ್ಯವಿದೆ. ಘನ ತ್ಯಾಜ್ಯಗಳ ಮತ್ತು ಕಸ ನಿರ್ವಹಣೆಗೆ ಏಕೀಕೃತ ನಿಯಂತ್ರಣ ವ್ಯವಸ್ಥೆ ಜಾರಿಗೆ ಕ್ರಮಕೈಗೊಳ್ಳಬೇಕು. ತೆರಿಗೆ ಬಾಕಿ ವಸೂಲಾತಿಗೆ ಮತ್ತು ಸಂಗ್ರಹಕ್ಕೆ ಗಮನ ನೀಡುವಂತೆ ತಿಳಿಸಿದ ಅವರು ಜಿಲ್ಲೆಯಲ್ಲಿ ಅರಣ್ಯ ಪ್ರಮಾಣ ಕಡಿಮೆ ಇರುವ ಹಿನ್ನೆಲೆಯಲ್ಲಿ ನಗರದ ಹೊರವಲಯದಲ್ಲಿ ಅರಣ್ಯ ಭೂಮಿ ಗುರುತಿಸಲು ಪ್ರಯತ್ನಿಸಬೇಕು ಇಕೋ ಟೂರಿಸ್ಂ ಅಭಿವೃದ್ಧಿಗೆ ಪ್ರಸ್ತಾವನೆ ಸಿದ್ಧಪಡಿಸಬೇಕು. ಅರಣ್ಯ ಅಧಿಕಾರಿಗಳು ಅರಣ್ಯೀಕರಣ ಮತ್ತು ಇಕೋ ಟೂರಿಸ್ಂ ಕುರಿತು ಪಿಪಿಟಿ ಮೂಲಕ ವರದಿ ಸಿದ್ಧಪಡಿಸಲು ಸೂಚನೆ ನೀಡಿದರು.

ವಿಜಯಪುರ ನಗರದ ಸಮೀಪ ಬುರಾಣಾಪೂರ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಪ್ಯಾಕೇಜ್ ಒಂದರ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಏಜೆನ್ಸಿ ನಿಗದಿಯಾಗಿದ್ದು, ಪೂರ್ವ ಚಟುವಟಿಕೆಗಳು ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಅವರು ಹರ್ಷ ವ್ಯಕ್ತಪಡಿಸಿ ಈ ಹಿಂದೆ ಬೇಸಿಗೆ ಕಾಲದಲ್ಲಿ ತೀವ್ರ ನೀರಿನ ಸಂಕಷ್ಟ ಎದುರಿಸುತ್ತಿದ್ದ ಜಿಲ್ಲೆಯು ಕ್ರಮೇಣ ನೀರಿನ ಕೊರತೆಯಿಂದ ಹೊರಬರುತ್ತಿರುವುದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು.

ಕ್ರೀಡಾ ಇಲಾಖೆ ವ್ಯಾಪ್ತಿಯ ಸೈಕಲಿಂಗ್ ವೆಲೋಡ್ರೋಮ್ ನಿರ್ಮಾಣ ಮಾಡಲು ವಿಳಂಬ ಮತ್ತು ಈ ಹಿಂದಿನ ಏಜೆನ್ಸಿ ಕಾಮಗಾರಿಗೆ ನಿರಾಕರಿಸುತ್ತಿರುವುದರಿಂದ ನಿಯಮಾವಳಿಯಂತೆ ಈ ಏಜೆನ್ಸಿಯನ್ನು ರದ್ದು ಪಡಿಸಿ, ಬಾಕಿ ಅನುದಾನ ವಸೂಲಾತಿ ಮಾಡಿ ನೂತನ ಟೆಂಡರ್ ಕರೆಯುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಮೇಲಾಧಿಕಾರಿಗಳ ಗಮನಕ್ಕೆ ತರುವಂತೆ ಕ್ರೀಡಾಧಿಕಾರಿಗಳಿಗೆ ಸೂಚಿಸಿದರು. ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಬಾಕಿ ಉಳಿದ ಪ್ರಸ್ತಾವನೆಗಳ ಬಗ್ಗೆ ತಮ್ಮ ಗಮನಕ್ಕೆ ತರುವಂತೆ ಅವರು ಸೂಚನೆ ನೀಡಿದರು. ಇತ್ತೀಚೆಗೆ ಭೀಮಾನದಿ ವ್ಯಾಪ್ತಿಯಲ್ಲಿ ಬಂದಿದ್ದ ಪ್ರವಾಹ ಮತ್ತು ಅತೀವೃಷ್ಟಿಯಿಂದ ಹಾನಿಯಾದ ಕುರಿತು ಸಮಗ್ರ ವರದಿಯೊಂದಿಗೆ ಭವಿಷ್ಯದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಸಿದ್ಧತೆಗಳ ಬಗ್ಗೆ ಈಗಿನಿಂದಲೇ ಚಿಂತನೆ ನಡೆಸಿ ಹೆಚ್ಚಿನ ಸಾವು ನೋವು ಆಗದಂತೆ ರಕ್ಷಣಾ ಕ್ರಮಗಳ ಬಗ್ಗೆ ಪೂರ್ವ ಯೋಜನೆ ಸಿದ್ಧಪಡಿಸಿಟ್ಟುಕೊಳ್ಳಬೇಕು. ಭೀಮಾನದಿ ಪ್ರವಾಹ ಕುರಿತಂತೆ ಮುನ್ನೆಚ್ಚರಿಕಾ ವ್ಯವಸ್ಥೆ ಸದೃಢಗೊಳಿಸಬೇಕು. ಪರಿಹಾರಕ್ಕಾಗಿ ಮಂಜೂರಾದ ಅನುದಾನ, ಪರಿಹಾರ ನೀಡಿದ ಬಗ್ಗೆ ದಾಖಲೀಕರಣ ಸಮರ್ಪಕವಾಗಿರುವಂತೆ ನೋಡಿಕೊಳ್ಳಬೇಕು.

ಕೋವಿಡ್ ಹಿನ್ನೆಲೆ ಇತರೆ ಲಸಿಕಾ ಕಾರ್ಯಕ್ರಮಗಳ ಮೇಲೆ ಪರಿಣಾಮ ಆಗದಂತೆ ನಿಗಾ ವಹಿಸಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ಲಸಿಕಾ ಕಾರ್ಯಕ್ರಮಕ್ಕೆ ಪೂರ್ವಾಭ್ಯಾಸದ ಜೊತೆಗೆ ಮುಂದಿನ ದಿನಗಳಲ್ಲಿ ನೀಡಬಹುದಾದ ಲಸಿಕೆ ಬಗ್ಗೆ ಸಾರ್ವಜನಿಕರಲ್ಲಿ ಸೂಕ್ತ ಅರಿವು ಮೂಡಿಸಬೇಕು. ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಸೂಕ್ತ ಜಾಗೃತಿ ಮೂಡಿಸುವ ಕಾರ್ಯ ನಿರಂತರ ನಡೆಯಬೇಕು. ಕೋವಿಡ್ ರೋಗಿಗಳಿಗೆ ಇರುವಂತಹ ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಪರ್ಕಗಳ ಮತ್ತು ಹೋಮ್ ಐಸೋಲೇಶನ್‌ಗಳ ಬಗ್ಗೆ ಹೆಚ್ಚಿನ ಗಮನ ನೀಡುವಂತೆ ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಪಿ.ಸುನೀಲ ಕುಮಾರ್ ಕೋವಿಡ್ –19 ಡ್ರೈ ರನ್ ಪೂರ್ವಾಭ್ಯಾಸ, ಪ್ರವಾಹ ಹಾನಿ ಕುರಿತು ಮಾಹಿತಿ ನೀಡಿದರು. ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮ ಅರಿಸಿದ್ಧಿ, ಉಪವಿಭಾಗಾಧಿಕಾರಿ ರಾಹುಲ್ ಸಿಂಧೆ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಭವಿಷ್ಯದ ಸಾಮಾಜಿಕ ಚಳುವಳಿಯ ನಾಯಕತ್ವವನ್ನು ಸ್ಲಂ ಜನರು ವಹಿಸಲಿ: ಪ್ರಸನ್ನ

ಬಿಜಾಪುರ,ಜ.09: ನಗರ ಸ್ಲಂ ಅಭಿವೃದ್ಧಿ ಸಮಿತಿ ಒಕ್ಕುಟದಿಂದ ಬೆಂಗಳೂರಿನಲ್ಲಿ ನಡೆದ ಸ್ಲಂ ಜನಾಂದೋಲನದ 11 ನೇಯ ವರ್ಷ ಆಚರಣೆಯಲ್ಲಿ ವಿಜಯಪುರ ಜಿಲ್ಲೆಯಿಂದ ಆಗಮಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸ್ಲಂಗಳು ಭಾರತದ ಜಾತಿ ವ್ಯವಸ್ಥೆಯ ಪ್ರತೀಕಗಳಾಗಿವೆ, ಹಳ್ಳಿಗಳಲ್ಲಿ ದುಡಿಮೆ ಇದ್ದರು ನಗರಗಳಿಗೆ ಜನರು ವಲಸೆ ಬರುವ ಮುಖ್ಯ ಕಾರಣ ಜಾತೀಯತೆಯಿಂದ, ಇದು ನನಗೆ ದೆಹಲಿಯಲ್ಲಿ ಮೂರು ದಶಕಗಳ ಹಿಂದೆಯೇ ಅನುಭವಕ್ಕೆ ಬಂದಿದೆ. ಇಂದಿನ ಸಂದರ್ಭದಲ್ಲಿ ಬಲಪಂಥೀಯ ರಾಜಕಾರಣವನ್ನು ಪ್ರತಿರೋಧಿಸಲು ನಾವು ಸಿಟ್ಟಿಗೆ ಒಳಗಾಗದೆ ತ್ಯಾಗ ಮತ್ತು ಧೈರ್ಯದಿಂದ ಜನಾಭಿಪ್ರಾಯ ಮೂಡಿಸಬೇಕಿದೆ. ಹಾಗಾಗಿ ಭವಿಷ್ಯದಲ್ಲಿ ನಗರ ಕೇಂದ್ರಿತ ಅಭಿವೃದ್ಧಿಯಿಂದ ಅಸಮಾನತೆ ಹೆಚ್ಚಾಗಲಿದ್ದು ಈ ಸಂಘರ್ಷವೇ ಸಾಮಾಜಿಕ ಚಳುವಳಿಗೆ ಕಾರಣವಾಗುವುದರಿಂದ ಇದರ ನಾಯಕತ್ವವನ್ನು ಸ್ಲಂ ನಿವಾಸಿಗಳು ವಹಿಸಬೇಕಿದೆ ಇದು ನಿಮ್ಮ ಜವಾಬ್ದಾರಿಯು ಸಹ ಆಗಿದೆ ಎಂದು ಹಿರಿಯ ರಂಗ ನಿರ್ದೇಶಕರಾಗಿರುವ ಪ್ರಸನ್ನ ಅವರು ಇಂದು 8/01/2021 ರಂದು ನಗರದ ಗಾಂಧಿಭವನದಲ್ಲಿ ಸ್ಲಂ ಜನಾಂದೋಲನ ಕರ್ನಾಟಕದ 11ನೇ



ವರ್ಷಾಚರಣೆ ಮತ್ತು ಸಾವಿತ್ರಿ ಬಾಪುಲೆ ಅವರ 190ನೇ ಜಯಂತಿ ಅಂಗವಾಗಿ "ನಗರ ವಂಚಿತ ಸಮುದಾಯಗಳ ಮುಂದಿನ ಹೆಜ್ಜೆಗಳ ಕುರಿತು ರಾಜ್ಯ ಮಟ್ಟದ ಪ್ರತಿನಿಧಿಗಳ ಸಭೆಯ ದಿಕ್ಸೂಚಿ ಮಾತುಗಳನಾಡಿದರು.

ಸ್ಲಂ ಜನರ ಬದುಕಿನಲ್ಲಿ ಶಿಕ್ಷಣ ಒಂದು ಮಹತ್ತರವಾದದ್ದು. ತಮ್ಮ ಮೇಲಿನ ಎಲ್ಲಾ ರೀತಿಯ ಶೋಷಣೆಯನ್ನು ಶಿಕ್ಷಣದ ಅರಿವಿನ ಮೂಲಕ ಪಡೆದುಕೊಂಡು ಸಮಾನತೆ ಸಾಧಿಸಲು ಮುಂದಾಗಬೇಕು. ಅಂಬೇಡ್ಕರ್ ಅವರ ಹೋರಾಟದ ಎರಡು ಪ್ರಮುಖ ಘಟ್ಟಗಳನ್ನು ಸ್ಲಂ ಜನರು ಅರ್ಥ ಮಾಡಿಕೊಳ್ಳಬೇಕು. ಅದರಲ್ಲಿ ಶಿಕ್ಷಣ ಮತ್ತು ಆರ್ಥಿಕತೆ ಬೆಂಬಲದ ಅಂಶವನ್ನು ಮಾತ್ರ ನಾವು ಹೆಚ್ಚು ಪಡೆದುಕೊಂಡಿದ್ದು. ಜಾತಿ ವಿನಾಶದ ಹಾದಿಯಲ್ಲಿ ಸಾಗುವುದನ್ನು ಮರೆತಿದ್ದೇವೆ. ಸರ್ಕಾರದ ಶಿಕ್ಷಣವನ್ನೇ ರೂಢೀಕರಿಸಿಕೊಂಡಿರುವ ನಾವು ಶ್ರಮ ಶಿಕ್ಷಣವನ್ನು ಗೌಣವಾಗಿಸಿದ್ದೇವೆ. ಆದ್ದರಿಂದ ನಾವು ಶ್ರಮ ಸಂಸ್ಕೃತಿಯ ಶಿಕ್ಷಣವನ್ನು ಅಥೈರ್ಯಸಿಕೊಂಡು ತಳ ಸಮುದಾಯಗಳ ಅನುಭವವನ್ನು ಗೌರವಿಸಬೇಕಿದೆ. ಹಾಗಾಗಿ ಕೊಳಗೇರಿ ಗಳಲ್ಲಿರುವ ಮಾನವ ಶ್ರಮವನ್ನು ಸಾಮಾಜಿಕ ತಾರತಾಮ್ಯದ ವಿರುದ್ಧ ಕ್ರೂಢಿಕರಿಸುವಂತಹ ಹೋರಾಟಗಳನ್ನು ಕೈಗೊಳ್ಳಬೇಕು, ನಗರಗಳಲ್ಲಿ ಸ್ಲಂ ಜನರ ಹಕ್ಕನ್ನು ಪ್ರತಿಪಾದಿಸಲು ಸಂಘಟನೆ ಸಿದ್ದವಾಗಬೇಕು. ನಮ್ಮ ಹೋರಾಟ ಸೈದ್ಧಾಂತಿಕವಾದ ತಳಹದಿಯ ಮೇಲೆ ಪ್ರತಿರೋಧವನ್ನು ವ್ಯಕ್ತಪಡಿಸುವ ನಗರ ಕೇಂದ್ರತವಾದ ಚಳುವಳಿಯಾಗಿ ರೂಪುಗೊಳ್ಳಬೇಕು. ಈ ಹೆಜ್ಜೆಗಳಲ್ಲಿ ನಡೆದರೆ ಕಂಡಿತವಾಗಿಯೂ ಪರ್ಯಾಯವಾದ ರಾಜಕಾರಣ ಮಾಡಲು ಸಾಧ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಷ್ಟ್ರೀಯಾ ಕಾನೂನು ಶಾಲೆಯ ಪ್ರಾಧ್ಯಾಪಕರಾದ ಪ್ರೋ॥ ಬಾಬಾ ಮ್ಯಾಥ್ಯೂ ನಗರೀಕರಣದ ಈ ಸಂದರ್ಭದಲ್ಲಿ ನಗರದಲ್ಲಿ ಬದುಕುವ ಹಕ್ಕನ್ನು ಗುರಿಯಾಗಿಸಿಕೊಂಡ ಸ್ಲಂ ಜನರ ಸಂಘಟನೆಯನ್ನು ಬಲಿಷ್ಠಗೊಳಿಸಿಕೊಳ್ಳಬೇಕಿದೆ. ಇದಕ್ಕಾಗಿ ಪ್ರಜಾಪ್ರಭುತ್ವವಾದಿ ಸಂಘಗಳನ್ನು ಸ್ಲಂಗಳಲ್ಲಿ ರಚಿಸಿ ಭೂ ಮಾಲೀಕತ್ವ ಮತ್ತು ವಸತಿ ಹಕ್ಕಿಗಾಗಿ ಸ್ಲಂ ಜನಾಂದೋಲನ ಕರ್ನಾಟಕ ಮುಂದಾಗಬೇಕು. ಈ ಪ್ರಶ್ನೆಗಳು ನಮ್ಮ ಸಂಘಟನೆಯ ನೀತಿಯಾದಾಗ ಮಾತ್ರ ಸರ್ಕಾರಗಳ ಮೇಲೆ ಪ್ರಭಾವ ಬೀರಲು ಸಾಧ್ಯವಾಗುತ್ತದೆ. ಹಾಗೂ ಸ್ಲಂ ಸಂಘಟನೆಗಳು ಐಕ್ಯವಾದ ಹೋರಾಟ ರೂಪಿಸಲು ಒಂದು ವೇದಿಕೆ ಅತ್ಯವಶಕವಾಗಿದೆ ಎಂದರು.

ಪಿಯುಸಿಎಲ್‌ನ ರಾಜ್ಯಾಧ್ಯಕ್ಷರಾದ ಪ್ರೋ ವೈ.ಜೆ ರಾಜೇಂದ್ರ ಮತ್ತು ಸ್ಲಂ ಜಗತ್ತು ಪತ್ರಿಕೆ ಸಂಪಾದಕರಾದ ಐಸಾಕ್ ಅರುಳ್ ಸೆಲ್ವಾ, ಗಜ಼ಲ್ ಕವಿ ಅಲ್ಲಗಿರಿರಾಜು, ರಾಜ್ಯ ಸಮಿತಿ ಪದಾಧಿಕಾರಿಗಳಾದ ಚಂದ್ರಮ್ಮ, ಗೀತಾ, ದೀಪಿಕಾ, ಅಕ್ರಮ್ ಮಶಳ್ಕರ್, ಜನಾರ್ಧನ್ ಉಪಸ್ಥಿತರಿದ್ದರು. ರಾಜ್ಯ ಸಂಚಾಲಕರಾದ ಎ.ನರಸಿಂಹಮೂರ್ತಿ ಪ್ರಸ್ತಾವಿಕವಾಗಿ ಮಾತನಾಡಿದರು. ನಿರೂಪಣೆಯನ್ನು ತೇಜಸ್ ಕುಮಾರ್ ಮತ್ತು ಸ್ವಾಗತವನ್ನು ಕಾವೇರಿ ಮಾಡಿದರು.

ಪ್ರತಿನಿಧಿ ಸಭೆಯ ಹಕ್ಕೋತ್ತಾಯ ವನ್ನು ಸರಕಾರದ ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಪರವಾಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತರಾದ ಶ್ರೀ ಶಿವಪ್ರಸಾದ್ ಮನವಿ ಸ್ವೀಕರಿಸಿ ಮಾತನಾಡಿ ಸಂಘಟನೆಯ ನಿರಂತರ ಹೋರಾಟದಿಂದ ರಾಜ್ಯ ಸರ್ಕಾರ ಇತ್ತೀಚ್ಚೆಗೆ ಹಕ್ಕುಪತ್ರ ನೀಡುವ ಐತಿಹಾಸಿಕ ನಿರ್ಣಯ ಕೈಗೊಂಡಿದ್ದು ಹಂತಹಂತವಾಗಿ ಕ್ರಯಪತ್ರ ನೀಡಲಾಗುವುದು.

ನಗರ ಪ್ರದೇಶದಲ್ಲಿ ವಸತಿ ನಿರ್ಮಾಣಕ್ಕೆ ಅಗತ್ಯವಿರುವ ಲ್ಯಾಂಡ್ ಬ್ಯಾಂಕ್ ನೀತಿ ಜಾರಿಗೊಳಿಸಲು ಪ್ರಸ್ತಾವನೆ ಸರಕಾರದ ಉನ್ನತ ಮಟ್ಟದ ಸಮಿತಿಗೆ ಸಲ್ಲಿಸಲಾಗುವುದು. ಸ್ಲಂ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಪಾಲಿನ ಒತ್ತಾಯವನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದರು. ಎಂದು ಬಿಜಾಪುರ ಜಿಲ್ಲೆಯಿಂದ ಸ್ಲಂ ಜನರ ಪ್ರತಿನಿದಿಯಾಗಿ ಪಾಲಗೊಂಡ ಸ್ಲಂ ಸಮಿತಿ ಒಕ್ಕೂಟದ ಅಧ್ಯಕ್ಷರಾದ ಅಕ್ರಂ ಮಾಶ್ಯಾಳಕರ ಇವರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

## ವಿಕಲಚೇತನರಿಗೆ ದ್ವಿಚಕ್ರ ವಾಹನಕ್ಕೆ ಅರ್ಜಿ

ಬಾಗಲಕೋಟೆ, ಜ.09: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಶೇ.75 ರಷ್ಟು ದೈಹಿಕ ವಿಕಲತೆ ಹೊಂದಿರುವ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿಚಕ್ರ ವಾಹನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವ ವಿಕಲಚೇತನರು 20 ರಿಂದ 60 ವರ್ಷದೊಳಗಿದ್ದು, ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ಮೀರಿರಬಾರದು. ಅರ್ಜಿ ಸಲ್ಲಿಸುವ ಕೊನೆಯ ದಿನ ಜನವರಿ 15 ಆಗಿದೆ. ಹೆಚ್ಚಿನ ವಿವರಗಳಿಗಾಗಿ ದೂಸಂ.08354–235556, ತಾಲೂಕಾ ಮಟ್ಟದಲ್ಲಿ ಬಾಗಲಕೋಟೆ (9538714441), ಬಾದಾಮಿ (9481135932), ಹುನಗುಂದ (8970565869), ಬೀಳಗಿ (9880445231), ಮುಧೋಳ (9008173773) ಹಾಗೂ ಜಮಖಂಡಿ (9900417764)ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ಎಸಿಬಿ : 13 ರಿಂದ ಅಹವಾಲು ಸ್ವೀಕಾರ

ಬಾಗಲಕೋಟೆ, ಜ. 09: ಭ್ರಷ್ಟಾಚಾರ ನಿಗ್ರಹ ದಳದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಹಾಗೂ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಜನವರಿ 13 ಮತ್ತು 15 ರಂದು ಹಮ್ಮಿಕೊಳ್ಳಲಾಗಿದೆ.

ಜನವರಿ 13 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ವರೆಗೆ ಬಾದಾಮಿ ಮತ್ತು ಹುನಗುಂದ ತಹಶೀಲ್ದಾರ ಕಚೇರಿ, ಮಧ್ಯಾಹ್ನ 3 ರಿಂದ ಸಂಜೆ 5 ವರೆಗೆ ಗುಳೇದಗುಡ್ಡ ಮತ್ತು ಇಲಕಲ್ಲ ತಹಶೀಲ್ದಾರ ಕಚೇರಿ, 15 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ವರೆಗೆ ಬನಹಟ್ಟಿ ಮತ್ತು ಮುಧೋಳ ತಹಶೀಲ್ದಾರ ಹಾಗೂ ಮಧ್ಯಾಹ್ನ 3 ರಇಂದ ಸಂಜೆ 5 ವರೆಗೆ ಜಮಖಂಡಿ ಮತ್ತು ಬೀಳಗಿ ತಹಶೀಲ್ದಾರ ಕಚೇರಿಯಲ್ಲಿ ಅಹವಾಲು ಸ್ವೀಕರಿಸಲಾಗುವುದು. ಸಾರ್ವಜನಿಕರು ಇದರ ಸದುಯೋಗ ಪಡೆದುಕೊಳ್ಳುವಂತೆ ಭ್ರಷ್ಠಾಚಾರ ನಿಗ್ರಹದಳದ ಪೊಲೀಸ್ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–220433ಗೆ ಸಂಪರ್ಕಿಸಬಹುದಾಗಿದೆ.

## 13 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಬಾಗಲಕೋಟೆ, ಜ.09 : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಹಾರ ಇಲಾಖೆ, ಜಿಲ್ಲಾ ಗ್ರಾಹಕರ ಆಯೋಗ, ಕಾನೂನು ಮಾಪನ ಶಾಸ್ತ್ರ, ಶಿಕ್ಷಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಜನವರಿ 13 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಬೆಳಿಗ್ಗೆ 10.30ಕ್ಕೆ ಜರಗುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಉದ್ಘಾಟಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೇಮಲತಾ ಹುಲ್ಲೂರ ಕರಪತ್ರ ಬಿಡುಗಡೆ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಶಾರದಾ ಕೆ., ಮುಖ್ಯ ಅತಿಥಿಗಳಾಗಿ ಜಿ.ಪಂ ಸಿಇಓ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಸುಮಂಗಲಾ ಹದ್ಲಿ, ರಂಗನಗೌಡ ಡಂಡಣ್ಣವರ ಭಾಗವಹಿಸಲಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಎಸ್.ಬಿರಾದಾರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಶಿಧರ ಪೂಜಾರ ಉಪಸ್ಥಿತರಿರುವರು. ನ್ಯಾಯವಾದಿ ಎಸ್.ಎನ್.ಕರ್ಜಗಿ ವಿಶೇಶ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಪರಿಸರ ಸ್ವಚ್ಛತೆ, ಸಮಾಜ ಸೇವೆಯಲ್ಲಿ ದೇವರಿದ್ದಾನೆ : ಸಿದ್ದು ಅವಟಿ

ವಿಜಯಪುರ,ಜ.09: ಪರಿಸರ ಸ್ವಚ್ಛತೆ ಹಾಗೂ ಸಮಾಜ ಸೇವೆಯಲ್ಲಿ ನಾವು ದೇವರನ್ನು ಕಾಣಬೇಕಿದ್ದು ಮನಪೂರ್ವಕವಾಗಿ ಪರಿಸರ ಸ್ವಚ್ಛತೆ ಮತ್ತು ಸಮಾಜ ಸೇವೆಯನ್ನು ಕೈಗೊಂಡಾಗ ಪರಮಾತ್ಮನನ್ನು ಕಾಣಲು ಸಾಧ್ಯ ಎಂದು ಯುವಧುರೀಣ ಸಿದ್ದು ಅವಟಿ ನುಡಿದರು.

ನಗರದ ವಾರ್ಡ ನಂ.1ರ ಶ್ರೀ ಸಂಗಮೇಶ್ವರ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರೂಡಸೆಟ್)ಹಾಗೂ ಅದೃಷ್ಟ ಲಕ್ಷ್ಮೀ, ಮಹಿಳಾ ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ವಾರ್ಡ ನಂ.1 ಸಂಗಮೇಶ್ವರ ಕಾಲೋನಿಯಲ್ಲಿ ಸ್ವಚ್ಛತಾ ಕಾರ್ಯಕ್ರಮವದ ಉದ್ಘಾಟಕರಾಗಿ ಜ್ಯೋತಿ ಬೆಳಗಿಸಿ ಮಾತನಾಡಿದ ಅವರು ಮಹಿಳೆಯರು ಕೇವಲ ಮನೆಗಷ್ಟೇ ಸೀಮತವಾಗದೆ ಸ್ವಸಹಾಯ ಸಂಘಗಳನ್ನು ನಿರ್ಮಿಸಿಕೊಂಡು ಕೆಲಸ ಕಾರ್ಯಗಳೊಂದಿಗೆ ಆರ್ಥಿಕ ಸಬಲತೆಯನ್ನು ಹೊಂದಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಗಮೇಶ್ವರ ದೇವಸ್ಥಾನದ ಅಧ್ಯಕ್ಷರಾದ ಕಾಶಿನಾಥ ಬಾಗಾದಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ನಮ್ಮ ಕಾಲೋನಿಯ ಮಹಿಳೆಯರ ಹಕ್ಕುಗಳು ಮತ್ತು ಸಬಲೀಕರಣದ ಕುರಿತು ಅರಿತುಕೊಂಡು ಸಂಘಟಿತರಾಗಿ ಸ್ವಸಹಾಯ ಸಂಘಗಳ ರಚನೆಯೊಂದಿಗೆ ಸಾಮಾಜಿಕ ಸೇವೆಯನ್ನು ಮಾಡುತ್ತಿರುವುದು ಶ್ಲಾಘನೀಯ. ಉತ್ತರೋತ್ತರವಾಗಿ ಮಹಿಳಾ ಸಂಘಟನೆಗಳು ಅಭಿವೃದ್ಧಿ ಹೊಂದಲಿ. ಸದಸ್ಯರಿಗೆ ಭಗವಂತ ಶಕ್ತಿಯನ್ನು ನೀಡಲಿ ಎಂದು ಹಾರೈಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಣಾಭಿವೃದ್ಧಿ ಸಂಸ್ಥೆ (ರೂಡಸೆಟ್)ನ ಕಾರ್ಯಕ್ರಮ ಸಂಯೋಜಕ ಮೈಲಾರಿ, ಸಂಸ್ಥೆಯ ವಿವಿಧ ಯೋಜನೆಗಳನ್ನು ವಿವರಿಸಿದರು. ಖಜಾಂಚಿ ಕಾಶಿಬಾಯಿ ಅವಟಿ ಪ್ರಾರ್ಥಿಸಿದರು. ಸ್ವಸಹಾಯ ಸಂಘದ ಅಧ್ಯಕ್ಷರಾದ ತಾರಾ ಬೆಳ್ಳಂಕಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಭಾರತಿ ಪೂಜಾರಿ ನಿರೂಪಿಸಿದರು. ಶಾಂತಾ ಉತ್ಲಾಸರ ಸಂಘದ ದ್ಯೆಯೊದ್ದೇಶಗಳನ್ನು ವಿವರಿಸಿದರು. ಸವಿತಾ ಶಿವಶರಣ ವಂದಿಸಿದರು.

## ನಾಳೆ ವಿವಿಧ ಜಯಂತಿಗಳ ಪೂವಭಾವಿ ಸಭೆ

ಬಾಗಲಕೋಟೆ: ಜ.09 : ಜಿಲ್ಲೆಯಲ್ಲಿ ಜನವರಿ 14 ರಂದು ಆಚರಿಸಲ್ಪಡುವ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ, 19 ರಂದು ಮಹಾಯೋಗಿ ವೇಮನ ಜಯಂತಿ ಹಾಗೂ 21 ರಂದು ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜನವರಿ 11 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೋವಿಡ್–19 ಲಸಿಕೆ ಪೂರ್ವಾಭ್ಯಾಸ ಅಂಗವಾಗಿ ಮಾದರಿ ಲಸಿಕಾ ಕೇಂದ್ರ ಪರಿಶೀಲನೆ



ವಿಜಯಪುರ, ಜ.9: ಜಿಲ್ಲೆಯ 15 ಸಾವಿರಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್–19 ಲಸಿಕೆ ನೀಡುವ ಕುರಿತಂತೆ ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಪಿ.ಸುನೀಲ ಕುಮಾರ್ ಅವರು ತಿಳಿಸಿದರು.

ನಗರದ ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್–19 ಮಾದರಿ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪೂರ್ವಾಭ್ಯಾಸ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಪ್ರಥಮ ಹಂತದಲ್ಲಿ ಜಿಲ್ಲೆಯ 15 ಸಾವಿರಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ –19 ಲಸಿಕೆ ನೀಡುವ ಕುರಿತಂತೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಪ್ರತಿಯೊಂದು ಲಸಿಕಾ ಕೇಂದ್ರದಲ್ಲಿ 5 ಅಧಿಕಾರಿಗಳನ್ನೊಳಗೊಂಡ ತಂಡಕ್ಕೆ ತರಬೇತಿ ನೀಡಲಾಗಿದೆ. ಇದಕ್ಕಾಗಿ 3 ಕೊಠಡಿಗಳನ್ನು ಸಿದ್ಧಪಡಿಸಲಾಗಿದ್ದು, ತಂತ್ರಾಂಶದಲ್ಲಿ ಅಪ್‌ಡೇಟ್, ಲಸಿಕೆ ನೀಡುವ ಕಾರ್ಯ ಹಾಗೂ ಲಸಿಕಾ ನಂತರ ಅಬ್ಸರ್ವೇಶನ್‌ಗೆ ಪ್ರತ್ಯೇಕ ಕೊಠಡಿ ಕಾಯ್ದಿರಿಸಿ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲೆಯ 6 ಸ್ಥಳಗಳಲ್ಲಿ ಇಂದು ಪೂರ್ವಾಭ್ಯಾಸ ಹಮ್ಮಿಕೊಳ್ಳಲಾಗಿದ್ದು, ಕೋವಿಡ್–19 ಲಸಿಕೆ ಹೊರತುಪಡಿಸಿ ಇತರ ಎಲ್ಲ ಸೌಕರ್ಯಗಳನ್ನು ಕಲ್ಪಿಸಿ ಪೂರ್ವಾಭ್ಯಾಸ ನಡೆಸಲಾಗುತ್ತಿದೆ. ಚುನಾವಣಾ ಮಾದರಿಯಲ್ಲಿ ಸಿಬ್ಬಂದಿಗಳ ನಿಯೋಜನೆ, ತಂತ್ರಾಂಶದಲ್ಲಿ ಫಲಾನುಭವಿಗಳ ಹೆಸರು ಪರಿಶೀಲನೆ, ಕೋವಿಡ್ ಲಸಿಕೆ ನಂತರ ಆಗುವ ವ್ಯತರಿಕ್ತ ಪರಿಣಾಮಗಳ ಬಗ್ಗೆ ಪರಿಶೀಲಿಸಿ ಅಂತಹ ಪ್ರಕರಣ ಕಂಡುಬಂದಲ್ಲಿ ನಿಗದಿತ ಸಮಿತಿಯಲ್ಲಿ ಸಲಹೆ ಪಡೆದು ತಕ್ಷಣ ಆರೈಕೆ ಮಾಡುವ ಬಗ್ಗೆ ಪೂರ್ವಾಭ್ಯಾಸ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಪೂರ್ವಾಭ್ಯಾಸ ನಂತರ ಅಲ್ಪಾವಧಿಯ ಯೋಜನೆಯನ್ನು ಸಹ ರೂಪಿಸಲಾಗುತ್ತದೆ. ನಿಗದಿತ ಸಿಬ್ಬಂದಿಗಳನ್ನು ಗುರುತಿಸಿ ಸೂಕ್ತ ಸೌಕರ್ಯಗಳ ವ್ಯವಸ್ಥೆ ಮತ್ತು ಇನ್ನಿತರ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಎರಡನೇ ಹಂತದಲ್ಲಿ ಮುಂಚೂಣಿ ಕಾರ್ಯಕರ್ತರು (ಫ್ರಂಟ್ ಲೈನ್ ವರ್ಕರ್ಸ್) ಗುರುತಿಸಲಾಗಿದೆ. ಮೂರನೇ ಹಂತದಲ್ಲಿ ಬಹುಸಂಖ್ಯಾತ ಜನಸಂಖ್ಯೆಯನ್ನು ಗುರುತಿಸಲಿದ್ದು, ಮತದಾನ ಕೇಂದ್ರ ರೂಪದಲ್ಲಿ ಲಸಿಕಾ ಕೇಂದ್ರಗಳ ಸ್ಥಾಪನೆ ಮತ್ತು ಸರ್ಕಾರದಿಂದ ನೀಡಲಾಗುವ ಮಾನದಂಡಗಳ ಆಧಾರದ ಮೇಲೆ ಸೂಕ್ತ ಕ್ರಮಕೈಗೊಳ್ಳುವುದಾಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆ ಸರ್ಜನ್ ಶರಣಪ್ಪ ಕಟ್ಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಂದ್ರ ಕಾಪ್ಸೆ, ಡಾ,ಲಕ್ಕನ್ನವರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಎಂ.ಬಿ ಬಿರಾದಾರ, ಡಬ್ಲೂಎಚ್‌ಓ ಪ್ರತಿನಿಧಿ ಮುಕುಂದ ಗಲಗಲಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಶ ನಾಗರಬೆಟ್ಟ, ಟಿಎಚ್‌ಓ ಡಾ.ಕವಿತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಇಂದು ವಸತಿ ಸಚಿವ ವಿ ಸೋಮಣ್ಣ ಜಿಲ್ಲಾ ಪ್ರವಾಸ

ಹುಬ್ಬಳ್ಳಿ,ಜ.09: ವಸತಿ ಸಚಿವ ವಿ. ಸೋಮಣ್ಣ ಅವರು ಜ.10 ಹಾಗೂ 11 ರಂದು ಹುಬ್ಬಳ್ಳಿ ಪ್ರವಾಸ ಕೈಗೊಂಡಿದ್ದಾರೆ. ಜ. 10 ರಂದು ಬೆಂಗಳೂರಿನಿಂದ ಹುಬ್ಬಳ್ಳಿಗೆ ಆಗಮಿಸುವ ಅವರು ಮಧ್ಯಾಹ್ನ 12 ಗಂಟೆಗೆ ನೂತನವಾಗಿ ಚುನಾಯಿತರಾದ ಗ್ರಾ.ಪಂ ಸದಸ್ಯರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಹೂಡುವರು.

ಜ.11 ಸೋಮವಾರ ದಂದು ಬೆಳಿಗ್ಗೆ 10.30 ಕ್ಕೆ ಹುಬ್ಬಳ್ಳಿ ಸರ್ಕ್ಯೂಟ್ ಹೌಸನಲ್ಲಿ ವಸತಿ ಯೋಜನೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸುವರು. ನಂತರ ಸಾರ್ವಜನಿಕರ ಭೇಟಿ ಮಾಡುವರು. ಮಧ್ಯಾಹ್ನ 3 ಗಂಟೆಗೆ ರಸ್ತೆಯ ಮೂಲಕ ಗದಗ ಜಿಲ್ಲೆಗೆ ತೆರಳುವರು ಎಂದು ಸಚಿವರ ಪ್ರವಾಸ ಕಾರ್ಯಕ್ರಮದಲ್ಲಿ ತಿಳಿಸಲಾಗಿದೆ.

## ಗ್ರಾಮೀಣ ಅಂಚೆ ನೌಕರರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬಳ್ಳಾರಿ,ಜ.09: ಕರ್ನಾಟಕ ಅಂಚೆ ವೃತ್ತವು ರಾಜ್ಯದಲ್ಲಿ ಖಾಲಿಯಿರುವ ಗ್ರಾಮೀಣ ಅಂಚೆ ನೌಕರರ 2,443 ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಜಿ ಸಲ್ಲಿಸುವವರು ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಪೂರ್ಣಗೊಂಡಿರಬೇಕು, 18ರಿಂದ 40 ವರ್ಷದ ಒಳಗಡೆಯಿರಬೇಕು. ಅನುಸೂಚಿ ಜಾತಿ /ಪಂಗಡ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಯೋಮಿತಿಯಲ್ಲಿ ಸಡಲಿಕೆಯಿರುತ್ತದೆ. ಸಾಮಾನ್ಯ ಅಭ್ಯರ್ಥಿಗಳು 100 ರೂ. ಅರ್ಜಿ ಶುಲ್ಕವಿರುತ್ತದೆ. ಪರಿಶಿಷ್ಟ ಜಾತಿ/ಪಂಗಡ, ಎಲ್ಲಾ ಮಹಿಳಾ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ, ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಅರ್ಜಿಯನ್ನು http://appost.in/gdsonline ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜ.20 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಮುಖ್ಯ ಕಾರ್ಯಾಲಯ 08022392599,ದಕ್ಷಿಣ ಕರ್ನಾಟಕ ವಲಯ 9481455606,ಉತ್ತರ ಕರ್ನಾಟಕ ವಲಯ 0836–2740454, ಕರ್ನಾಟಕ ವೃತ್ತ 080–22392544 ಸಂಪರ್ಕಿಸಬಹುದು.

### ಮಹಾನಗರ ಪಾಲಿಕೆ ಪ್ರಗತಿ ಪರಿಶೀಲನೆ

# ನಿರಂತರ ನೀರು ಯೋಜನೆಗೆ ಸಂಪೂರ್ಣ ನೆರವು: ಸಚಿವ ಬಸವರಾಜ್ ಭರವಸೆ



ಬೆಳಗಾವಿ, ಜ,09 : ನಿರಂತರ ನೀರು ಯೋಜನೆ ನಗರದ ಜನತೆಗೆ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಈ ಯೋಜನೆಯ ಅನುಷ್ಠಾನ ಕುರಿತು ವಿಶೇಷ ಕಾಳಜಿ ವಹಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಸಚಿವರಾದ ಬಿ.ಎ.ಬಸವರಾಜ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಶುಕ್ರವಾರ (ಜ.8) ನಡೆದ ಪಾಲಿಕೆ, ಸ್ಮಾರ್ಟ್ ಸಿಟಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಿರಂತರ ನೀರು ಯೋಜನೆ ಯೋಜನೆಗೆ ಮುಖ್ಯ ಮಂತ್ರಿಗಳಿಂದ ಚಾಲನೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಯೋಜನೆಯ ತುರ್ತು ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲ ನೆರವು ಸರ್ಕಾರ ನೀಡಲಿದೆ ಎಂದು ಸಚಿವ ಬಸವರಾಜ್ ಭರವಸೆಯನ್ನು ನೀಡಿದರು.

**ಆರ್.ಎಫ್.ಐ.ಡಿ. ಟ್ಯಾಗ್ ವೈಫಲ್ಯ–ವರದಿ ಸಲ್ಲಿಸಲು ಸೂಚನೆ:** ಕಸ ಸಂಗ್ರಹಣೆಗೆ ಸಂಬಂಧಿಸಿದಂತೆ ನಗರದಲ್ಲಿ ಅಳವಡಿಸಲಾಗಿರುವ ಆರ್.ಎಫ್.ಐ.ಡಿ. ಟ್ಯಾಗ್ ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬಸವರಾಜ್ ಎಚ್ಚರಿಕೆ ನೀಡಿದರು.

ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರ ಸ್ವಚ್ಛವಾಗಿಡಬೇಕಾದರೆ ಕಸ ವಿಲೇವಾರಿ ವ್ಯವಸ್ಥೆ ಸಮರ್ಪಕವಾಗಿ ಇರಬೇಕು. ನಿಯಮಾವಳಿ ಉಲ್ಲಂಘಿಸಿ ಕಸ ಚೆಲ್ಲುವವರ ವಿರುದ್ಧ ದಂಡದ ಜತೆಗೆ ಪ್ರಕರಣ ದಾಖಲಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

**ಆಸ್ತಿ ತೆರಿಗೆ ಸಂಗ್ರಹಕ್ಕೆ ಕಟ್ಟುನಿಟ್ಟಿನ ಸೂಚನೆ:** ನಿಗದಿಪಡಿಸಲಾಗಿರುವ ಆಸ್ತಿ ತೆರಿಗೆಯನ್ನು ಮಾರ್ಚ್ ಅಂತ್ಯದೊಳಗೆ ಶೇ.100 ರಷ್ಟು ಕಡ್ಡಾಯವಾಗಿ ಸಂಗ್ರಹಿಸಬೇಕು ಎಂದು ಸಚಿವ ಬಸವರಾಜ್ ಸೂಚನೆ ನೀಡಿದರು.

ಆಸ್ತಿ ತೆರಿಗೆಯಿಂದ ಸಾರ್ವಜನಿಕರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು ಸಾಧ್ಯ. ಆದ್ದರಿಂದ ಆಸ್ತಿ ತೆರಿಗೆ ಸಂಗ್ರಹಣೆಯಲ್ಲಿ ನಿರ್ಲಕ್ಷ್ಯ ತೋರಬಾರದು ಎಂದರು.

ಬಾಕಿ ತೆರಿಗೆಯನ್ನು ಮಾಸಾಂತ್ಯದಲ್ಲಿ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಬಾಕಿ ಉಳಿದಿರುವ ಜಾಹೀರಾತು ಮೊತ್ತ ಪಾವತಿಸದೇ ಇರುವ ಸಂಸ್ಥೆಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಪಾಲಿಕೆಯ ಆಡಳಿತಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ಅನಧಿಕೃತ ಜಾಹೀರಾತು ಫಲಕಗಳನ್ನು ತಕ್ಷಣವೇ ತೆರವುಗೊಳಿಸುವಂತೆ ತಿಳಿಸಿದರು.

**ಸ್ವಚ್ಛತೆ ನಿರ್ಲಕ್ಷಿಸಿದರೆ ಕ್ರಮ–ಸಚಿವರ ಎಚ್ಚರಿಕೆ:** ಕುಡಿಯುವ ನೀರು ಪೂರೈಕೆ, ಸ್ವಚ್ಛತೆ, ಬೀದಿ ದೀಪ ಮತ್ತಿತರ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕು.

ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಶಾಸಕ ಪಾಟೀಲ ಒತ್ತಾಯ:

ನಿರಂತರ ನೀರು ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಳಂಬಕ್ಕೆ ಕಾರಣವಾದ ಸಂಸ್ಥೆಗೆ ದಂಡ ವಿಧಿಸಲು ಕ್ರಮ ಕೈಗೊಳ್ಳಬೇಕು ಎಂದು ಬೆಳಗಾವಿ ದಕ್ಷಿಣ ಮತಕ್ಷೇತ್ರದ ಶಾಸಕ ಅಭಯ್ ಪಾಟೀಲ ಒತ್ತಾಯಿಸಿದರು.

ಕ ಂ ಡಿ ೦ ಂ ಂ ಂ ವ

ನೀರು, ಒಳಚರಂಡಿ, ಅಮೃತ ಸೇರಿದಂತೆ ಬಹುತೇಕ ಯೋಜನೆ ನೆನೆಗುದಿಗೆ ಬಿದ್ದಿರುವುದರಿಂದ ಜನರು ಜನಪ್ರತಿನಿಧಿಗಳ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಆದ್ದರಿಂದ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬೆಳಗಾವಿ ನಗರದಲ್ಲಿ ಸುಮಾರು ಒಂದು ಲಕ್ಷ ಆರ್.ಎಫ್.ಐ.ಡಿ. ಟ್ಯಾಗ್ ಅಳವಡಿಸಲಾಗಿದೆ. ಆದರೆ ಅದರಲ್ಲಿ ಕೇವಲ ಮೂರ್ನಾಲ್ಕು ಸಾವಿರ ಕಾರ್ಡುಗಳು ಮಾತ್ರ ರೀಡ್ ಮಾಡಲಾಗುತ್ತಿದೆ ಎಂದು ಶಾಸಕ ಅಭಯ್ ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

46 ಕೋಟಿ ರೂಪಾಯಿ ವೆಚ್ಚದ ಆರ್.ಎಫ್.ಐ.ಡಿ. ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸದ ಸಂಬಂಧಿಸಿದ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವರಿಗೆ ಒತ್ತಾಯಿಸಿದರು.

**ಕಸ ವಿಲೇವಾರಿ–ನಾಗರಿಕ ಸಮಿತಿ ರಚಿಸಲು ಸಲಹೆ:** ಕಸ ವಿಲೇವಾರಿ ಮೇಲುಸ್ತುವಾರಿಗೆ ವಾರ್ಡವಾರು ನಾಗರಿಕ ಸಮಿತಿ ರಚಿಸಬೇಕು. ಸಮಿತಿ ಸಹಿ ಮಾಡಿ ನೀಡಿದ ಬಳಿಕವೇ ಗುತ್ತಿಗೆದಾರರಿಗೆ ಹಣ ಪಾವತಿಸಬೇಕು ಎಂದು ಶಾಸಕ ಅಭಯ್ ಪಾಟೀಲ ಸಲಹೆ ನೀಡಿದರು.

ಅನಧಿಕೃತ ಜಾಹೀರಾತು ಫಲಕಗಳನ್ನು ತಕ್ಷಣವೇ ತೆರವುಗೊಳಿಸಬೇಕು ಮತ್ತು ಬಾಕಿ ಉಳಿಸಿಕೊಂಡಿರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಮಹಾನಗರ ಪಾಲಿಕೆಯ ಅನುಮತಿ ಇಲ್ಲದೇ ರಸ್ತೆ ಅಗೆಯುವ ನೀರು ಸರಬರಾಜು ಮಂಡಳಿ, ಹೆಸ್ಕಾಂ ಮತ್ತಿತರ ಸಂಸ್ಥೆಗಳ ವಿರುದ್ಧ ದಂಡ ವಿಧಿಸಬೇಕು ಎಂದು ಆಗ್ರಹಿಸಿದರು.

ಕಂಟೋನ್ಮೆಂಟ್ ಪ್ರದೇಶದಲ್ಲಿ ಕಸ ವಿಲೇವಾರಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ ಎಂದು ಶಾಸಕ ಅನಿಲ್ ಬೆನಕೆ ಅವರು ಸಚಿವರ ಗಮನಕ್ಕೆ ತಂದರು.

ಬೆಳಗಾವಿ ನಗರದಲ್ಲಿ ಯುಜಿಡಿ ವ್ಯವಸ್ಥೆ ಸುಧಾರಣೆ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಸಮಗ್ರ ಅಭಿವೃದ್ಧಿಗೆ 500 ಕೋಟಿ ರೂಪಾಯಿ ವೆಚ್ಚದ ಪ್ರಸ್ತಾವ ಸಿದ್ಧಪಡಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಕಸ ಸಂಗ್ರಹಣೆ, ಪ್ರತ್ಯೇಕ ಮತ್ತು ವಿಲೇವಾರಿಗೆ ಪ್ರತಿ ವಾರ್ಡಿಗೆ ಪ್ರತ್ಯೇಕ ವಾಹನ ಹೊಂದುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಪಾಲಿಕೆಯ ಆಯುಕ್ತರಾದ ಜಗದೀಶ್ ತಿಳಿಸಿದರು.

**45 ಕೋಟಿ ಆಸ್ತಿ ತೆರಿಗೆ ಗುರಿ:** ಈ ವರ್ಷ 45 ಕೋಟಿ ಗುರಿ ನಿಗದಿಪಡಿಸಲಾಹಿತ್ತು. ಇದುವರೆಗೆ 30 ಕೋಟಿ ರೂಪಾಯಿ ಸಂಗ್ರಹಿಸಲಾಗಿದೆ. ಕಳೆದ ವರ್ಷಕ್ಕಿಂತ ಐದು ಕೋಟಿ ಹೆಚ್ಚುವರಿ ಗುರಿ ನಿಗದಿಪಡಿಸಲಾಗಿದೆ ಎಂದು ಆಯುಕ್ತರಾದ ಜಗದೀಶ್ ತಿಳಿಸಿದರು.

ಕೆಯುಐಡಿಎಫ್ ಸಿ ಅಧ್ಯಕ್ಷರಾದ ಶಂಕರ್ ಪಾಟೀಲ ಮುನೇನಕೊಪ್ಪ, ಕೆಯುಡಬ್ಲ್ಯುಸಿ ನಿರ್ದೇಶಕರಾದ ದೀಪಾ ಕುಡಚಿ, ಬುಡಾ ಅಧ್ಯಕ್ಷ ಘೂಳಪ್ಪ ಹೊಸಮನಿ, ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ವಿವಿಧೆಡೆ ಕುಡಿಯುವ ನೀರಿನ ಪೈಪಲೈನ್ ಅಳವಡಿಕೆ ಕಾಮಗಾರಿಗೆ ಶಾಸಕ ಯಾದವಾಡ ಭೂಮಿಪೂಜೆ



ರಾಮದುರ್ಗ,ಜ,09: ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೋಗಲಾಡಿಸಲು ಮಲಪ್ರಭಾ ನದಿಯಿಂದ ಅವರಾದಿ, ಹೂಲಿಗೊಪ್ಪ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಪ್ರತಿ ಮನೆಗಳಿಗೂ ಶುದ್ಧ ಕುಡಿಯುವ ನೀರು ಪೂರೈಸುವ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರಕಾರದಿಂದ ಅನುದಾನ ಮಂಜೂರು ಮಾಡಿಸಿದ್ದೇನೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು ಎಂದು ಶಾಸಕ ಮಹಾದೇವಪ್ಪ ಯಾದವಾಡ ಹೇಳಿದರು.

ತಾಲೂಕಿನ ಅವರಾದಿ ಗ್ರಾಮದಲ್ಲಿ 1.14 ಕೋಟಿ, ಹುಲಿಗೊಪ್ಪ ಗ್ರಾಮದಲ್ಲಿ 32.70 ಲಕ್ಷ, ಕೊಳಚಿ ಗ್ರಾಮದಲ್ಲಿ 18.90 ಲಕ್ಷ, ಘಟಕನೂರನಲ್ಲಿ 73.50 ಲಕ್ಷ ಚಿಂಚಖಂಡಿಯಲ್ಲಿ 25 ಲಕ್ಷ ಇಡಗಲ್‌ನಲ್ಲಿ 27 ಲಕ್ಷ ಲಿಂಗದಾಳದಲ್ಲಿ 46.95 ಲಕ್ಷ ವೆಚ್ಚದಲ್ಲಿ ಒಟ್ಟು 1965 ಮನೆಗಳಿಗೆ ಕುಡಿಯುವ ನೀರಿನ ನಲ್ಲಿ ಜೋಡಣೆ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬರಗಾಲದ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಗುತ್ತಿಗೆದಾರರು ನಲ್ಲಿ ಜೋಡಣೆಗೆ ಗುಣಮಟ್ಟದ ವಸ್ತುಗಳನ್ನು ಬಳಕೆ ಮಾಡಬೇಕು.

ಜೋಡಣೆ ನಂತರ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧಿಕಾರಿಗಳು ಅವುಗಳ ನಿರ್ವಹಣೆ ಮಾಡಿ ಗ್ರಾಮಸ್ಥರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು. ಕರೊನಾ ಹಾಗೂ ನೆರೆಹಾವಳಿಯಿಂದ ರಾಜ್ಯ ಅಭಿವೃದ್ಧಿಗೆ ಸ್ವಲ್ಪ ಹಿನ್ನಡೆಯಾಗಿದ್ದು, ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಗ್ರಾಮೀಣ ಪ್ರದೇಶಗಳ ಎಲ್ಲ ಬೇಡಿಕೆಗಳನ್ನು ಇಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಅವರಾದಿ ಫಲಹಾರೇಶ್ವರ ಮಠದ ಶ್ರೀ ಶಿವಮೂರ್ತಿ ದೇವರು ಮಾತನಾಡಿ, ನೆರೆ ಹಾವಳಿಯಿಂದ ಮಲಪ್ರಭಾ ನದಿ ಪಾತ್ರದ ಜನತೆಗೆ ತತ್ತರಿಸಿ ಹೋಗಿದ್ದಾರೆ.

ಅವರಿಗೆ ಶಾಶ್ವತ ಸೂರಿನ ಜೊತೆಗೆ ಈ ಭಾಗದ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಗ್ರಾಮೀಣ ಜನತೆಯ ಆಶೋತ್ತರಗಳಿಗೆ ಸ್ಪಂದಿಸಬೇಕೆಂದು ಶಾಸಕರಿಗೆ ಮನವಿ ಮಾಡಿದರು.

ಜಿ.ಪಂ ಸದಸ್ಯರಾದ ರೇಣಪ್ಪ ಸೋಮಗೊಂಡ, ಶಿವಕ್ಕ ಬೆಳವಡಿ, ಎಪಿಎಂಸಿ ಅಧ್ಯಕ್ಷ ದ್ಯಾವಪ್ಪ ಬೆಳವಡಿ, ಶ್ರೀಶೈಲ ಮೆಳ್ಳಿಕೇರಿ, ಗೌಡಪ್ಪ ಜಾಲಪ್ಪನವರ, ಅವರಾದಿ, ಕೊಳಚಿ, ಘಟಕನೂರ, ಚಿಂಚಖಂಡಿ, ಇಡಗಲ್, ಲಿಂಗದಾಳ ಗ್ರಾಮಗಳ ನೂತನ ಗ್ರಾ.ಪಂ ಸದಸ್ಯರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಶ್ರೀನಿವಾಸ ವಿಶ್ವಕರ್ಮ, ಜೆಇಗಳಾದ ಪ್ರತಾಪ, ಚೌಗುಲಾ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಹಾಗೂ ಇತರರಿದ್ದರು.

## ಉತ್ಸವದಿಂದ ಶ್ರೀ ಬಸವೇಶ್ವರ ಪಲ್ಲಕ್ಕಿ



ಹಳ್ಳೂರ,ಜ,09: ಮಾರಾಕುಡಿ ಗ್ರಾಮದಲ್ಲಿರುವ ಶ್ರೀ ಮಾರುತಿ ದೇವರ ಕಾರ್ತಿಕೋತ್ಸವವು ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಶನಿವಾರ ಮುಂಜಾನೆ ಮಾರುತಿ ದೇವರ ಪೂಜೆ, ಅಭಿಷೇಕ, ನೈವೇದ್ಯ,ನಡೆದು ನಂತರ ಆರತಿ ಕುಂಭಮೇಳದೊಂದಿಗೆ ಮಾರುತಿ ದೇವರ ಹಾಗೂ ಶ್ರೀ ಬಸವೇಶ್ವರ ಪಲ್ಲಕ್ಕಿ ಉತ್ಸವ ಜರುಗುವದು.

ಸರ್ವರಿಗೂ ಅನ್ನಪ್ರಸಾದ ವ್ಯವಸ್ಥೆ ಇರುವದು. ಮದ್ಯಾಹ್ನ 12 ಗಂಟೆಯಿಂದ ರಾತ್ರಿ 8, ಗಂಟೆಯವರೆಗೆ ಗೀಗಿ ಪದಗಳು ನಡೆಯುವವು. ಅದೇ ದಿನ ರಾತ್ರಿ" ಗ್ರಾಮ ಪಂಚಾಯತ ಗಂಗವ್ವ" ಅರ್ಥಾರ್ತ ಅಪ್ಪ ಸಾದು ಮಗ ಚೋದು ಎಂಬ ಸುಂದರ ಸಾಮಾಜಿಕ ನಾಟಕ ಜರುಗುವದು ಎಂದು ಮಾರಾಕುಡಿ ಗ್ರಾಮದ ಮಾರುತಿ ದೇವರ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಬರಿ ಮಲ್ಲೆಗೆ ಮಾಲಾಧಾರಿಗಳಿಗೆ ಪ್ರವೇಶ ನಿಷೇಧ




ಹುಕ್ಕೇರಿ,ಜ,09 : ಶಬರಿ ಮಲ್ಯೆಗೆ ಮಾಲಾಧಾರಿಗಳಿಗೆ ಪ್ರವೇಶ ನಿಷೇಧ ಖಂಡಿಸಿದ ಪ್ರಮೋದ ಮುತಾಲಿಕ.

ಅಯ್ಯಪ್ಪಾ ಸ್ವಾಮಿ ಮಾಲಾಧಾರಿಗಳಿಗೆ ಕೇರಳ ಸರ್ಕಾರ ಕೋವಿಡ್ ಹಿನ್ನಲೆಯಲ್ಲಿ ಪ್ರವೇಶ ನಿಷೇದಿಸಿದ ಹಿನ್ನೆಲೆಯಲ್ಲಿ ಶ್ರೀ ರಾಮ ಸೇನೆ ಸಂಘಟನೆ ತಿವ್ರವಾಗಿ ಖಂಡಿಸಿ ಇಂದು ರಾಷ್ಟ್ರಾದ್ಯಕ್ಷ ಪ್ರಮೋದ ಮುತಾಲಿಕ ನೇತೃತ್ವದಲ್ಲಿ ಹುಕ್ಕೇರಿ ಅಯ್ಯಪ್ಪಾಸ್ವಾಮಿ ಸೇವಾ ಸಂಸ್ಥೆಯ ಗುರುಸ್ವಾಮಿ ಪ್ರಕಾಶ ಪಾಟೀಲ ಮಿನಿ ವಿಧಾನಸೌದಕ್ಕೆ ತೇರಳಿ ತಹಸಿಲ್ದಾರ ಅಶೋಕ ಗುರಾಣಿ ಮೂಲಕ ಮುಖ್ಯಮಂತ್ರಿ ಗಳಿಗೆ ಮನವಿ ಸಲ್ಲಿಸಿದರು.

ನಂತರ ಮಾದ್ಯಮಗಳೊಂದಿಗೆ ಮಾತನಾಡಿದ ಪ್ರಮೋದ ಮುತಾಲಿಕ ಮಾತನಾಡಿ ಪ್ರತಿ ವರ್ಷ ಅಯ್ಯಪ್ಪ ಸ್ವಾಮಿಗಳ ಲಕ್ಷಾಂತರ ಮಾಲಾಧಾರಿಗಳು ಕೇರಳ ರಾಜ್ಯದ ಶಬರಿ ಮಲ್ಯೆಗೆ ತೇರಳಿ ಮಕರ ಜ್ಯೋತಿ ದರ್ಶನ ಮಾಡುತ್ತಾರೆ ಆದರೆ ಈ ವರ್ಷ ಕೋವಿಡ್ ನೆಪ ನೀಡಿ ಪ್ರವೇಶ ನಿಷೇಧಿಸಿದ್ದಾರೆ

ಕೇರಳ ಸರ್ಕಾರ ನಾಸ್ತಿಕವಾದಿಗಳಾಗಿದ್ದು ಇದನ್ನು ಶ್ರೀರಾಮ ಸೇನೆ ಖಂಡಿಸುತ್ತದೆ , ದೇಶದಲ್ಲಿ ಮಾಲ್‌ಗಳು, ಪಬ್‌ಗಳು, ರಾಜಕೀಯ ಸಭೆಗಳು ಯಚೆತ್ತವಾಗಿ ನಡೆದಿವೆ ಆದರೆ ಮಾಲಾಧಾರಗಳಿಗೆ ಕೇರಳ ರಾಜ್ಯಕ್ಕೆ ಪ್ರವೇಶ ಏಕೆ ಇಲ್ಲಾ ಕೂಡಲೆ ಕೇಂದ್ರ ಸರ್ಕಾರ ಮದ್ಯ ಪ್ರವೇಶಿಸಿ ಕೇರಳ ರಾಜ್ಯಕ್ಕೆ ಸೂಚನೆ ನೀಡಬೇಕು ಇಲ್ಲವಾದರೆ ದೇಶ್ಯಾದ್ಯಂತ ಪ್ರತಿಭಟನೆ ಮಾಡಲಾಗುವದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಅಯ್ಯಪ್ಪಾ ಸ್ವಾಮಿ ಸೇವಾ ಸಮಿತಿ ಮಾಲಾಧಾರಿಗಳಾದ ಪ್ರಕಾಶ ಪಾಟೀಲ, ಚಿದಾನಂದ ಬಸ್ತವಾಡ, ನೇಮಿನಾಥ ಖಾನಾಪೂರೆ, ಚೀದು ಬರಗಾಲಿ, ಗುರುಲಿಂಗ ಮುದಕನ್ನವರ, ಶೇಖರ ಮಾಲಾಜ, ಶ್ರೀರಾಮ ಸೇನೆ ಸಂಘಟನೆ ಮುಖಂಡರಾದ ಸುಭಾಸ ಕೇಸರಕರ, ಶಿವರಾಜ ನಾಯಿಕ, ವಿವೇಕ ಪುರಾಣಿಕ, ಸುಧಾಕರ ಶೇಟ್ಟಿ ಮೊದಲಾದವರು ಉಪಸ್ಥಿತರಿದ್ದರು.

## ಮೂಡಲಗಿ : ಶುದ್ಧ ಗಂಗಾ ನೀರಿನ ಘಟಕದ ಉದ್ಘಾಟನೆ



ಮೂಡಲಗಿ,ಜ,09: ನೀರಿನ ಘಟಕಗಳನ್ನು ಲಾಭಕೋಸ್ಕರ ಮಾಡುತ್ತಿಲ್ಲಾ ಕೇವಲ ಜನರಿಗೆ ಉತ್ತಮ ಆರೋಗ್ಯ ಉಳಿಸಿಕೋಳ್ಳಲು ನೀರನ್ನು ಶುದ್ಧಿಕರಿಸಿ ಕೋಡುತ್ತಿದ್ದೆವೆ, ಮೂಡಲಗಿ ತಾಲೂಕಿನ ಕುಲಗೋಡ, ನಾಗನೂರ ಸೇರಿ ಮೂರನೇಯ ಘಟಕ, ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯಲ್ಲಿ ಸಂಘ ರಚನೆ ಮಾಡುವದರ ಆರ್ಥಿಕ ವವ್ಯಸ್ಥೆ ಸುದಾರಣೆಗೋಸ್ಕರ ಬ್ಯಾಂಕಿನ ಮೂಲಕ ಸಾಲ ಕೋಡಿಸಿ ಸ್ವ ಉದ್ಯೋಗಕ್ಕೆ ಪೂರಕವಾಗಿ ಮಾಹಿತಿ ಮಾರ್ಗದರ್ಶನ ತರಬೇತಿಗಳನ್ನು ನೀಡುತ್ತಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಿಣಾಭಿವೃದ್ದಿ ಯೋಜನೆಯ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಹೇಳಿದರು,

ಸಮೀಪದ ಶಿವಾಪೂರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಿಣಾಭಿವೃದ್ದಿ ಯೋಜನೆ ಹಾಗೂ ಶಿವಾಪೂರ ಗ್ರಾಮ ಪಂಚಾಯತ ಇವುಗಳ ಸಂಯುಕ್ತ ಆಶ್ರಯದಲ್ಲಿ ಶುದ್ದಗಂಗಾ ನೀರಿನ ಘಟಕದ ಉದ್ಘಾಟನೆಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು,

ನಿರ್ಗತಿಕರಾದವರಿಗೆ ಪ್ರತಿ ತಿಂಗಳು 750 ರಿಂದ 3000 ವರಗೆ ಮಾಸಾಶನ ವಿತರಿಸುವ ವವ್ಯಸ್ಥೆಯಾಗಿದೆ ಮತ್ತು ಅವರಿಗಾಗಿ ಮೂಡಲಗಿ ತಾಲೂಕಿನಲ್ಲಯೇ 29 ಜನರಿಗೆ ವಾತ್ಸಲ ಕಾರ್ಯಕ್ರಮದ ಅಡಿಯಲ್ಲಿ ಹಾಸಿಗೆ ಹೊದಿಗೆ, ಅಡುಗೆ ಮಾಡಲು ಪಾತ್ರೆ ಹಾಗೂ ಧರಿಸಲು ಬಟ್ಟೆಗಳನ್ನು ಧರ್ಮಸ್ಥಳ ಯೋಜನೆಯಿಂದ ಕಳಿಸಿದ ವಸ್ತುಗಳನ್ನು ಸದ್ಯ ವಿತರಿಸುತ್ತೆವೆ, ಕೃಷಿಕರಿಗೆ ಪ್ರಗತಿ ನಿಧಿ ನೀಡಿ ಮಾಹಿತಿ ತರಬೇತಿ ಪ್ರೇರಣೆಯ ಜೊತೆಗೆ ಅನುದಾನವನ್ನು ನೀಡಲಾಗುತ್ತಿದೆ ಎಂದರು ವಿಕಲಚೇತನರಿಗೆ ವ್ಹೀಲ ಚೇರ ಹಾಗೂ ವಾಟರ ಬೆಡ್ ಊರುಗೋಲು ಇನ್ನಿತರ ಅಗತ್ಯ ಸಲಕರಣೆಗಳನ್ನು ಉಚಿತವಾಗಿ ವಿತರಿಸಲಾಗುವದು ಎಂದರು.

ಶೇ 99ರಷ್ಟು ಕಾರ್ಯಕ್ರಮಗಳು ಸಮಾಜಕ್ಕೆ ಹಾಗೂ ಸಮಾಜದ ಒಳಿತಿಗಾಗಿ ಪೂಜ್ಯ ವೀರೇಂದ್ರ ಹೆಗಡೆಯವರು ರೂಪಿಸಿದ ಯೋಜನೆಗಳನ್ನು ಪ್ರತಿ ಹಳ್ಳಗಳಲ್ಲಿ ಶುದ್ದ ನೀರು, ಬಯಲು ಶೌಚಾಲಯಗಳ ಮುಕ್ತ ಗ್ರಾಮ ನಿರ್ಮಾನಗಳಂತ ಯೋಜನೆಗಳು ಜಾರಿ ಇವೇ ಎಂದರು,

ಶಾಸಕರ ಆಪ್ತ ಕಾರ್ಯದರ್ಶಿ ದಾಸಪ್ಪ ನಾಯ್ಕ ಕಾರ್ಯಕ್ರಮ ಉದ್ಘಾಟಿಸಿ ಗ್ರಾಮ ಪಂಚಾಯತದಿಂದ ವಿಕಲಚೇತನರಿಗೆ ವ್ಹೀಲ ಚೇರ ವಿತರಿಸಿದರು,

ಮುಖ್ಯ ಅಥಿತಿಗಳಾಗಿ ಶಂಕರಗೌಡ ಪಾಟೀಲ್, ಶಿವನಗೌಡ ಪಾಟೀಲ್, ತಾ.ಪಂ ಸದಸ್ಯ ಕೆಂಪ್ಪಣ್ಣ ಮುಧೋಳ, ಗ್ರಾ ಪಂ ಸದಸ್ಯ ಹಣಮಂತ ತೇರದಾಳ, ಸತೀಶ ಜುಂಜರವಾಡ, ಕೆಂಪ್ಪನ ಮುಧೋಳ ಶಿವಬಸು ಜುಂಜರವಾಡ,ಸುರೇಶ ಡಬ್ಬನ್ನವರ ಆಗಮಿಸಿದರು,

ತಾಲೂಕಾ ಯೋಜನಾಧಿಕಾರಿ ದೇವರಾಜ, ಮೂಡಲಗಿ ವಲಯ ಮೇಲ್ವಿಚಾರಕಿ ಮಾನಶಿ ಪಾಟೀಲ್, ಸೇವಾ ಪ್ರತಿನಿಧಿ ಕಸ್ತೂರಿ, ಸವಿತಾ ಹಾಗೂ ಮಹಾದೇವಿ ಉಪಸ್ಥಿತರಿದ್ದರು,

ಎಸ್ ಎಮ್ ಜುಂಜರವಾಡ ಸ್ವಾಗತಿಸಿದರು, ಎ ಜಿ ಗೀರೆನ್ನವರ ನಿರೋಪಿಸಿದರು, ಪಿ ಡಿ ಓ ಶ್ರೀಶೈಲ ತಡಸನ್ನವರ ವಂದಿಸಿದರು,

## ಇಂಧನ ತಯಾರಿಕೆ ಹಾಗೂ ಇಂಧನ ಉಳಿತಾಯದ ಒಂದು ದಿನದ ಕಾರ್ಯಾಗಾರ



ಘಟಪ್ರಭಾ,ಜ,09: ಮಹಾತ್ಮಾ ಗಾಂಧಿ ಗ್ರಾಮೀಣ ಇಂದನ ಅಭಿವೃದ್ದಿ ಸಂಸ್ಥೆ ಬೆಂಗಳೂರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆ ಹಾಗೂ ಮಹಿಳಾ ಕಲ್ಯಾಣ ಕೆಂದ್ರ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಕಚ್ಚಾವಸ್ತುಗಳಿಂದ ಇಂದನ ತಯಾರಿಕೆ ಹಾಗೂ ಇಂದನ ಉಳಿತಾಯದ ಒಂದು ದಿನದ ಕಾರ್ಯಾಗಾರವನ್ನು ಸ್ವಸಹಾಯ ಸಂಘಗಳ ಮಹಿಳೆಯರಿಗಾಗಿ ಶ್ರೀ ದಾನೇಶ್ವರಿ ಎನ್.ಟಿ.ಸಿ.ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಡಾ. ಚಿದಾನಂದ ಗವಿಮಠ ಅವರು ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿ ನಿರುಪಯೋಗಿ ಪ್ಲ್ಯಾಸ್ಟಿಕ್‌ದಿಂದ ಡಿಜೆಲ್.ಹಾಗೂ ಇನ್ನಿತರ ಬೀಜಗಳಿಂದ ಪೆಟ್ರೋಲ್ ಉತ್ಪಾದನೆ ಮಾಡಿ ಸ್ವಂತ ವಾಹನಗಳಿಗೆ ಉಪಯೋಗಿಸುವ ಬಗ್ಗೆ ವಿವರವಾಗಿ ತಿಳಿಸಿದರು.

ಈ ಸಂಧರ್ಭದಲ್ಲಿ ಲಕ್ಷ್ಮೀ ಮುಗಡ್ಲಿಮಠ ಅವರು ಬರೆದ ಜಾನಪದ ಕೃತಿ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದ ಸಾನಿದ್ಯವನ್ನು ಘಟಪ್ರಭಾ ಹೊಸಮಠದ ಪೂಜ್ಯ ವಿರುಪಾಕ್ಷದೇವರು ವಹಿಸಿದ್ದರು.

ವೇದಿಕೆಯ ಮೇಲೆ ವಿಜೇಂದ್ರಾಚಾರ್ಯ ಜೋಶಿ, ಶ್ರೀಮತಿ ಅನುರಾದಾ ಕಾಪಶಿ, ರಾಜಶೇಖರ ಪಾಟೀಲ, ವಿಜಯಕುಮಾರ, ಕಿರಣ ಚೌಗಲಾ,ಜಿ. ಎಸ್. ಕರ್ಪೂರಮಠ, ಶ್ರೀಕಾಂತ ಮಹಾಜನ, ಪ್ರೇಮಾ ಮಠಪತಿ ಸೇರಿದಂತೆ ಸ್ಥಳೀಯ ಭಜನಾ ಮಂಡಳದ ಮಹಿಳೆಯರು ಇದ್ದರು. ಮಾಲುತಾಯಿ ಶಿರಗೂರಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ದೈಹಿಕ ವಿಕಲಚೇತನರಿಂದ ಯಂತ್ರಚಾಲಿತ ದ್ವಿಚಕ್ರ ವಾಹನಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ,ಜ,09: 2020–21 ನೇ ಸಾಲಿಗೆ ಇಲಾಖೆಯ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆಯಡಿ ಜಿಲ್ಲೆಯ ದೈಹಿಕ ವಿಕಲಚೇತನರಿಂದ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಶೇಕಡಾ 75 ಅಥವಾ ಹೆಚ್ಚಿನ ಅಂಗವಿಕಲತೆ ಪ್ರಮಾಣ ಹೊಂದಿರುವ ಕನಿಷ್ಠ 20 ವರ್ಷ ಗರಿಷ್ಠ 60 ವರ್ಷ ವಯೋಮಿತಿಗೊಳಪಟ್ಟ ವಿಕಲಚೇತನ ವ್ಯಕ್ತಿಗಳು ತಮ್ಮ ತಾಲೂಕಿನ ತಾಲೂಕು ಪಂಚಾಯತಿ ಕಛೇರಿಯಲ್ಲಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್.ಡಬ್ಲ್ಯೂ)ರಿಗೆ ಈ ಕೆಳಕಾಣಿಸಿದ ಅಗತ್ಯ ದಾಖಲಾತಿಗಳೊಂದಿಗೆ ಜನೇವರಿ 31.2021 ರ ಒಳಗಾಗಿ ಅರ್ಜಿ ಸಲ್ಲಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಾಗಿ ತಾಲೂಕಿನ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್.ಡಬ್ಲ್ಯೂ.)ರನ್ನು ಅಥವಾ ಕಛೇರಿ ದೂ. ಸಂಖ್ಯೆ: 0831–2476096 ಗೆ ಸಂಪರ್ಕಿಸಬಹುದಾಗಿದೆ.

## ಇಂದು 'ಅಪ್ಪ ಚಿಂತ್ಯಾಗ ಮಗಳು ಸಂತ್ಯಾಗ' ನಾಟಕ ಪ್ರದರ್ಶನ



ಬೆಳಗಾವಿ,ಜ,09 : ಬಾಗಲಕೋಟೆಯ ಶ್ರೀ ವೀರೇಶ್ವರ ನಾಟ್ಯಸಂಘದ ವತಿಯಿಂದ ಜ.10ರಂದು ಮಧ್ಯಾಹ್ನ 2.30 ಕ್ಕೆ ಇಲ್ಲಿನ ಸದಾಶಿವನಗರದ ಪದ್ಮಶ್ರೀ ಚಿಂದೋಡಿ ಲೀಲಾ ರಂಗಮಂದಿರದಲ್ಲಿ 'ಅಪ್ಪಚಿಂತ್ಯಾಗ ಮಗಳು ಸಂತ್ಯಾಗ' ನಾಟಕ ಪ್ರದರ್ಶನಏರ್ಪಡಿಸಲಾಗಿದೆ.

ಯಮಕನಮರಡಿ ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ನಾಟಕ ಪ್ರದರ್ಶನಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿ ಗಳಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ಸಂಜೀವಕುಮಾರ ಹುಲಕಾಯಿ, ಬೆಳಗಾವಿ ಗ್ರಾಮಾಂತರ ಉಪವಿಭಾಗದ ಸಹಾಯಕ ಪೊಲೀಸ್‌ಆಯುಕ್ತಗಣಪತಿಯು. ಗುಡಾಜಿ, ಬೆಳಗಾವಿ ನಗರ ವಲಯಕ್ಷೇತ್ರ ಶಿಕ್ಷಣಾಕಾರಿ ವೈಫ್.ಜೆ. ಭಜಂತ್ರಿ, ನೀರಾವರಿಇಲಾಖೆಯ ಸಂತೋಷ ಮುತನಾಳ, ಮುಚ್ಚಂಡಿಯ ಸಮಾಜ ಸೇವಕ ಬಾಬು ಮೇಗಿನಮನಿ, ತಾಲೂಕು ಪಂಚಾಯಿತಿ ಸದಸ್ಯ ಹಾಗೂ ಸುಳೇಬಾವಿ ಶ್ರೀ ಮಹಾಲಕ್ಷ್ಮೀದೇವಸ್ಥಾನಕಮಿಟಿ ಸದಸ್ಯ ಬಸವನಗೌಡ ಬಾಳಪ್ಪ ಹುಂಕ್ರಿ ಪಾಟೀಲ, ಕೆ.ಕೆ. ಕೊಪ್ಪಕರ್ನಾಟಕ ವಿಕಾಸ ಬ್ಯಾಂಕ್ನಅಣ್ಣಪ್ಪಗೌಡ ಪಾಟೀಲ, ಮುಚ್ಚಂಡಿಯ ಸಮಾಜ ಸೇವಕ ಡಾ. ಮನೋಹರ ಪಾಕರೆ, ಸಾರಿಗೆ ಸಂಸ್ಥೆ ಕಾರ್ಮಿಕ ಮುಖಂಡಈರಣ್ಣಾ ಮದುವಾಲ, ಸಮಾಜ ಸೇವಕ ಯಮನಪ್ಪ ಮಾರುತಿ ಭಜಂತ್ರಿ ಪಾಲ್ಗೊಳ್ಳಲಿದ್ದಾರೆ ಎಂದು ನಾಟ್ಯಸಂಘದ ವ್ಯವಸ್ಥಾಪಕರಾದ ಹನಮಂತಪ್ಪ ಹಾಗೂ ವೀರೇಶ ಹುಬ್ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

